ಹಿತ್ತಲ ಗಿಡ

ಚಾತುರ್ಮಾಸಿಕ

ತಳಮಟ್ಟದ ಜನರಿಗೆ ಪ್ರತಿಫಲ
ನೀಡುವಂತಹ ತಂತ್ರಜ್ಞಾನ, ಸಂಸ್ಥೆ
ಮತ್ತು ಮೌಲ್ಯಗಳನ್ನು ಹುಟ್ಟು
ಹಾಕುವತ್ತ ಕೈಜೋಡಿಸೋಣ

ಪೈರು 13, (ಕೊಯಿಲು 3, 2007), ಪೈರು 14 (ಕೊಯಿಲು 1, 2008)

ತಳಮಟ್ಟ ಜ್ಞಾನ ಜಾಲದ ನೈಜ ವಾರಸುದಾರರು



ಈ ಸಂಚಿಕೆಯಲ್ಲಿ

ತಳಮಟ್ಟದ ಜ್ಞಾನ ಜಾಲ - 1
ಆರಳೀಕಟ್ಟೆ - 1
ದೇಶೀಯ ಹತೋಟಿ - 2
ದೇಶೀಯ ಜಾಣ್ಮೆ - 3
ಪುಣ್ಯಕೋಟಿ - 4
ಸೃಷ್ಟಿಸನ್ಮಾನಿತರು - 4
ದೇಶೀಯ ಗೋತಳಿಗಳು - 5
ಸಾವಯವ ಕೃಷಿ - 6
ಕೂಚುಭಟ್ಟ - 6
ದೇಶೀಯ ತಂತ್ರಜ್ಞಾನ - 7
ಜೀವ ವೈವಿಧ್ಯ 8-9
ನಳಪಾಕ -10
ಆಳಲೇಕಾಯಿ 10-11
ದೇಶೀಯ ಸಂಸ್ಥೆಗಳು -12

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology, Values & Institutions), Bangalore, **SRISTI** (Society for Research and Initiatives for Sustainable Technologies and Institutions), &
NIF (National Innovation Foundation, India), Ahmedabad

ಸಂಪಾದಕೀಯ

ಹನಿ ಬೀ ಜಾಲ (*Honey bee Network*) ದ ಸಭೆ ಕಳೆದ ಫೆಬ್ರವರಿ 28-29 ರಲ್ಲಿ ಅಹಮದಾಬಾದಿನಲ್ಲಿ ಜರುಗಿರುತ್ತದೆ. ತಳಮಟ್ಟದ ಜನರ ಸೃಜನಕಾರಕ ಅನುಶೋಧನೆ, ಪಾರಂಪರಿಕ ಜ್ಞಾನ, ತಂತ್ರಜ್ಞಾನ ಮತ್ತು ಜೀವ ವೈವಿಧ್ಯ ಇವುಗಳನ್ನು ಹುಡುಕಿ, ದಾಖಲಿಸಿ ಆ ಮೂಲಕ ಸುಸ್ಥಿರ ಅಭಿವೃದ್ಧಿಯ ಹೊಸತೊಂದು ಮಾದರಿಯನ್ನು ಹುಡುಕುವ ಪ್ರಯತ್ನವಾಗಿ ಈಗ್ಗೆ 18 ವರ್ಷಗಳ ಹಿಂದೆ ಪ್ರೊಫೆಸರ್ ಅನಿಲ್ ಗುಪ್ತ ನೇತೃತ್ವದ 'ಹನಿ ಬೀ' ಆಂಗ್ಲ ನಿಯತಕಾಲಿಕ ಜನ್ಮತಾಳಿತು. ಈ ಪ್ರಯತ್ನಕ್ಕೆ ಕನ್ನಡವೂ ಸೇರಿದಂತೆ ದೇಶದ ಐದಾರು ಬೇರೆ ಬೇರೆ ಭಾಷೆಗಳಲ್ಲಿ ಸ್ಥಳೀಯ ಪ್ರಕಟಣೆಗಳೂ ಕೈ ಜೋಡಿಸಿದವು. ಈ ಪ್ರಯತ್ನವನ್ನು ಸಮನ್ವಯಗೊಳಿಸಿ, ಮತ್ತಷ್ಟು ಗಟ್ಟಿಮಾಡಲು 'ಸೃಷ್ಟಿ' (*SRISTI-Society for Research and Initiatives for Sustainable Technologies and Institutions*) ಎಂಬ ಸರ್ಕಾರೇತರ ಸಂಸ್ಥೆಯನ್ನು 1993 ರಲ್ಲಿ ಸ್ಥಾಪಿಸಲಾಯಿತು.

ಈ ತಳಮಟ್ಟದ ಅನುಶೋಧನೆಗಳನ್ನು, ಅದರಲ್ಲೂ ಮುಖ್ಯವಾಗಿ ಯಾಂತ್ರಿಕ ಅನುಶೋಧನೆಗಳು ಇತ್ಯಾದಿಗಳನ್ನು, ವಾಣಿಜ್ಯ ದೃಷ್ಟಿಯಿಂದ ವ್ಯವಸ್ಥಿತಗೊಳಿಸಲು 'ಗ್ಯಾನ್' (*GIAN -Grassroot Innovation Augmentation Network*) ಸಂಸ್ಥೆಯನ್ನು ಗುಜರಾತ್ ಸರ್ಕಾರದ ಸಹಯೋಗದಿಂದ ಮೊಟ್ಟಮೊದಲ ಬಾರಿಗೆ 1997 ರಲ್ಲಿ ಹುಟ್ಟು ಹಾಕಲಾಯಿತು. ಈ ರೀತಿಯ ಪ್ರಯತ್ನವನ್ನು ಕರ್ನಾಟಕವೂ ಸೇರಿದಂತೆ ಕೆಲ ರಾಜ್ಯಗಳಲ್ಲಿ ಮಾಡಲಾಯಿತು. ಪ್ರೊ.ಗುಪ್ತಾರ ಅತ್ಯಂತ ಭಾವನಾತ್ಮಕ ಪರಿಕಲ್ಪನೆಯಾದ ಅನುಶೋಧನೆ (*Innovation*), ಹೂಡಿಕೆ (*Investment*), ಮತ್ತು ವಾಣಿಜ್ಯೋದ್ಯಮ (*Enterpreneurship*) ಗಳ ಸುವರ್ಣ ಸಂಗಮದ ಮೂಲಕ ತಳಮಟ್ಟದ ಅನುಶೋಧನೆಗಳನ್ನು ಗಟ್ಟಿ ಮಾಡುವುದೇ ಈ ಗ್ಯಾನ್ ಉದ್ದೇಶವಾಗಿದೆ. ಹೀಗೆ ಹನಿ ಬೀ, ಸ್ಥಳೀಯ ಪತ್ರಿಕೆಗಳು, ಸೃಷ್ಟಿ, ತಳಮಟ್ಟದ ಅನುಶೋಧಕರು, ಅವರನ್ನು ಹುಡುಕಿ ತೆಗೆಯುವವರು, ಅನುಶೋಧನೆಗಳ ಮೌಲ್ಯವರ್ಧಕರು, ಗ್ಯಾನ್ ಇವರೆಲ್ಲಾ ಸೇರಿ ಮಾಡಿಕೊಂಡಿರುವ ಒಂದು ಅವಿಧ್ಯುಕ್ತ ಸಂಘಟನೆಯೇ ಹನಿಬೀ ಜಾಲ.

ತಳಮಟ್ಟದ ಅನುಶೋಧನೆಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ನೀಡಿ, ಈ ಅನುಶೋಧಕರನ್ನು ವ್ಯವಸ್ಥಿತ ರೀತಿಯಲ್ಲಿ ಗುರುತಿಸಿ, ಗೌರವಿಸಿ, ಪುರಸ್ಕರಿಸುವ ಉದ್ದೇಶದಿಂದ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಸಹಕಾರದಿಂದ 'ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ' (*NIF-National Innovation Foundation*) ನ್ನು 1999 ರಲ್ಲಿ ಪ್ರಾರಂಭಿಸಲಾಯಿತು. ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಮಾತ್ರವಲ್ಲ, ತೃತೀಯ ಜಗತ್ತಿಗೆ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದೇ ಈ ಪ್ರತಿಷ್ಠಾನದ ಮೂಲ ಧ್ಯೇಯ. ಈ ನಿಟ್ಟಿನಲ್ಲಿ ಇದುವರೆಗೂ ರಾಷ್ಟ್ರ ಮಟ್ಟದ ಐದು ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ ನೆಡೆಸಿ, ಸಾವಿರಾರು ಜನರನ್ನು ರೂ. 10,000 ದಿಂದ ಲಕ್ಷ ರೂಗಳ ವರೆಗಿನ ಬಹುಮಾನ ನೀಡಿ ಪುರಸ್ಕರಿಸಲಾಗಿರುತ್ತದೆ. ಹಿಂದಿನ ರಾಷ್ಟ್ರಪತಿಗಳಾದ ಡಾ. ಅಬ್ದುಲ್‌ಕಲಾಂರವರೆ ಖುದ್ದಾಗಿ ಮೂರು ಸಮಾರಂಭಗಳಲ್ಲಿ ಭಾಗವಹಿಸಿ, ತಳಮಟ್ಟದ ಅನುಶೋಧಕರನ್ನು ಪುರಸ್ಕರಿಸಿರುತ್ತಾರೆ. ಕರ್ನಾಟಕದಿಂದಲೇ ಇದುವರೆಗೂ ಸುಮಾರು 30 ಮಂದಿಗೆ ರಾಷ್ಟ್ರೀಯ ಅನುಶೋಧನಾಪ್ರತಿಷ್ಠಾನದ ಗೌರವ ಮತ್ತು ಪುರಸ್ಕಾರ ದೊರಕಿರುತ್ತದೆ. ಆದರೆ, ಬರಿದೇ ಗೌರವ ಪುರಸ್ಕಾರಗಳಿಂದ ತಳಮಟ್ಟದ ಅನುಶೋಧನೆಗಳನ್ನು ಗಟ್ಟಿ ಮಾಡಿ, *NIF*ನ ಮಹತ್ವದ ಗುರಿ ಈಡೇರಿಸಿದಂತಾಗುತ್ತದೆಯೆ? ಈ ತಳಮಟ್ಟದ

ತಳಮಟ್ಟದ ಜ್ಞಾನ ಜಾಲ

ಅನುಶೋಧಕರು ಮತ್ತು ಪಾರಂಪರಿಕ ಜ್ಞಾನ ಪ್ರವೀಣರಿಗೆ ಈಗ ಸ್ವಲ್ಪ ಭರವಸೆ ದೊರೆತು ಅವರಲ್ಲಿ ಆಸೆ ಆಕಾಂಕ್ಷೆಗಳು ನಿಧಾನವಾಗಿ ಏಳ ತೊಡಗಿರುತ್ತದೆ. ಇತ್ತೀಚೆಗಿನ 'ಹನಿ ಬೀ ಜಾಲದ' ಸಭೆಯಲ್ಲಿ ಗ್ರಾಮೀಣ ಭಾರತದ ಎರಡು ಭೀಕರ ಸಮಸ್ಯೆಗಳಾದ, ರೈತ ಆತ್ಮಹತ್ಯೆ ಮತ್ತು ನಕ್ಸಲ್ ಚಳುವಳಿ ತೀವ್ರಗೊಳ್ಳುತ್ತಿರುವುದರ ಬಗ್ಗೆ ಕೂಡ ಪ್ರಸ್ತಾಪಿಸಲಾಯಿತು. ಹಾಗಾಗಿ, ಹನಿಬೀ ಜಾಲದ ಮತ್ತು *NIF* ಮೇಲಿನ ಜವಾಬ್ದಾರಿ ಕೂಡ ಅಧಿಕವಾಗತೊಡಗಿದೆ. ಈ ನಿಟ್ಟಿನಲ್ಲಿ ಪ್ರೊ. ಗುಪ್ತಾರವರು ಕೆಲ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿರುತ್ತಾರೆ. ಮೊದಲನೆಯದಾಗಿ, ಈ ತಳಮಟ್ಟದ ಅನುಶೋಧನೆಗಳು, ದೇಶೀಯ ತಂತ್ರಜ್ಞಾನ ಮತ್ತು ಪಾರಂಪರಿಕ ಜ್ಞಾನಗಳ ವಿಸ್ತೃತವೂ, ಗಟ್ಟಿಯೂ ಆದ ಒಂದು "ಜ್ಞಾನ ಜಾಲ" *(Knowledge Network)* ಸ್ಥಾಪಿಸುವುದು. ಇದು ಒಂದು ರೀತಿಯಲ್ಲಿ ಈ ಅಮೂಲ್ಯ ತೃತೀಯ ಜಗತ್ತಿನ ಸಂಪತ್ತನ್ನು ಸಾರ್ವತ್ರಿಕ ವ್ಯಾಪ್ತಿ *(PublicDomain)*ಗೆ ತಂದಂತಾಗುತ್ತದೆ. ಇದರಿಂದ ರೈತರು, ಬಡವರು, ಜನಸಾಮಾನ್ಯರಿಗೆ ಹೊರೆಯಾಗದ ರೀತಿಯಲ್ಲಿ ಜ್ಞಾನ, ತಂತ್ರಜ್ಞಾನಗಳು ದೊರೆತು ತಮ್ಮ ಸಮಸ್ಯೆಗಳಿಗೆ ಅಗ್ಗದ ಪರಿಹಾರ ದೊರೆಕಿಸಿಕೊಳ್ಳಲು ಸಹಕರಿಸಿದಂತಾಗುತ್ತದೆ. ಹನಿ ಬೀ, ಹಿತ್ತಲಗಿಡ ಮತ್ತಿತರ ಪತ್ರಿಕೆಗಳು ಈ ಕಾರ್ಯದತ್ತ ಈಗಾಗಲೇ ಸಣ್ಣ ಪ್ರಯತ್ನ ನಡೆಸಿದ್ದು, ಇದು ಗಟ್ಟಿಯಾಗುವತ್ತ ಮತ್ತಷ್ಟು ಯೋಚಿಸಬೇಕಾಗಿದೆ.

ಎರಡನೆಯದಾಗಿ, ಈ ತಳಮಟ್ಟದ ಅನುಶೋಧಕರು ಮತ್ತು ಪಾರಂಪರಿಕ ಜ್ಞಾನ ವಾಹಕರಿಗೆ ಜೀವನ ಭದ್ರತೆ ಗಟ್ಟಿಮಾಡಿ ಪ್ರತಿಫಲ ಮತ್ತು ಗೌರವ ದೊರಕಿಸುವಂತೆ ಮಾಡುವ ವಿಚಾರ. ಈ ಹಿಂದೆ ಚರ್ಚಿಸಿದಂತೆ ತಳಮಟ್ಟದ ಅನುಶೋಧನೆಗಳಲ್ಲಿ ಹಲವಕ್ಕೆ ವಾಣಿಜ್ಯಗೊಳ್ಳುವ ಸಾಮರ್ಥವಿರುತ್ತದೆ. ಇದು ಈಡೇರಿ, ಬಂದಂತಹ ಆದಾಯ ಮತ್ತು ಲಾಭಾಂಶದಲ್ಲಿ ನ್ಯಾಯಯುತ ಪಾಲು, ಈ ಅನುಶೋಧಕರು ಮತ್ತು ಜ್ಞಾನ ಸಂಪನ್ನ ಸಮುದಾಯಕ್ಕೆ ದೊರೆಯುವಂತಹ ವ್ಯವಸ್ಥೆ ಹುಟ್ಟುಹಾಕಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ನೀತಿ ನಿಯಮಗಳು ಬದಲಾದರೆ ಮಾತ್ರ ಸಾಲದು ನಮ್ಮ ವ್ಯವಸ್ಥಿತ ಶಿಕ್ಷಣ, ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳೂ ತೆರೆದ ಮನಸ್ಸಿನಿಂದ ಕೈ ಜೋಡಿಸಬೇಕಾಗಿದೆ.

ಇಂದು ಗ್ರಾಮೀಣ ಭಾರತ ಅನುಭವಿಸುತ್ತಿರುವ ಆ ತೀವ್ರ ತಳಮಳಕ್ಕೆ ಇದು ಒಂದು ಸೂಕ್ತ ಪರಿಹಾರವಾಗಬಹುದಾದ ಸಾಧ್ಯತೆ ಯಿರುವುದರಿಂದ ಈ ನಿಟ್ಟಿನಲ್ಲಿ ನಾವಿಂದು ಗಂಭೀರವಾಗಿ ಚಿಂತಿಸಬೇಕಾಗಿದೆ. ನಮ್ಮ ಕೃಷಿ ಇಂದು ಎದುರಿಸುತ್ತಿರುವ ಸಂಕಷ್ಟಕ್ಕೆ ಎರಡು ಪ್ರಮುಖ ಕಾರಣಗಳೆಂದರೆ ಉತ್ಪಾದನೆ ದುಬಾರಿ ಮತ್ತು ಅಸ್ಥಿರ *(unsustainable)* ವಾಗುತ್ತಿರುವುದು. ಈ ನಿಟ್ಟಿನಲ್ಲಿ, ಹಿಂದೆ ತಿಳಿಸಿರುವಂತೆ 'ದೇಶೀಯ ಜ್ಞಾನ ಜಾಲ'ನಮ್ಮ ಕೃಷಿಗೆ ಸುಸ್ಥಿರವೂ, ಪರಿಸರ ದೃಷ್ಟಿಯಿಂದ ಶುದ್ಧವೂ ಮತ್ತು ವೆಚ್ಚದ ದೃಷ್ಟಿಯಿಂದ ನಮ್ಮ ರೈತಾಪಿ ವರ್ಗಕ್ಕೆ ಕೈಗೆಟುಕುವಂತ ಅಗ್ಗದ ತಂತ್ರಜ್ಞಾನಗಳನ್ನು ಹುಟ್ಟು ಹಾಕುವ ಶಕ್ತಿ ಹೊಂದಿವೆ. ಇಂತಹ ನೂರಾರು ತಂತ್ರಜ್ಞಾನಗಳನ್ನೂ ಈಗಾಗಲೇ ದಾಖಲಿಸಲಾಗಿರುತ್ತದೆ. ('ಹಿತ್ತಲಗಿಡ'ದ ಹಳೆಯ ಸಂಚಿಕೆಗಳು ಅಥವಾ *SRISTI* ಅಂತರ್ ಜಾಲ : *http://www.sristi.org* ನೋಡಿರಿ) ಈ ಪ್ರಯತ್ನ ಮತ್ತಷ್ಟು ವ್ಯವಸ್ಥಿತವೂ ಹಾಗೇ ಸಮಗ್ರವು ಆಗುವಂತಹ ದಾರಿಗಳನ್ನು ನಾವಿಂದು ನೋಡಬೇಕಾಗಿದೆ. ಹಾಗೇ, ನಕ್ಸಲ್ ಸಮಸ್ಯೆಯ ಮೂಲವೂ ಇಲ್ಲಡಗಿರುವುದನ್ನು ಗಮನಿಸಬೇಕಾಗಿದೆ. ಬುಡಕಟ್ಟು ಜನರು, ಅರಣ್ಯವಾಸಿಗಳು, ಆದಿವಾಸಿಗಳು, ಪಾರಂಪರಿಕ ಜ್ಞಾನ, ಕಸಬು, ಕುಶಲತೆಗಳು ಮೂಲೆ ಗುಂಪಾಗಿರುವುದು, ಈ ಜನಾಂಗಗಳ ಜೀವನ ಭದ್ರತೆಗೆ ಏಟುಕೊಟ್ಟಿರುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಪ್ರಕ್ರಿಯೆಗಳಂತೂ ಈ ತೃತೀಯ ಜಗತ್ತಿನ ಅಮೂಲ್ಯ ಸಂಪತ್ತನ್ನು ಕೊಳ್ಳೆಹೊಡೆಯಲು ಅನುವು ಮಾಡಿಕೊಡುತ್ತವೆ ಹೊರತು ಗಟ್ಟಿ ಮಾಡುವುದಕ್ಕಲ್ಲ. ಇದರಿಂದ ರೊಚ್ಚಿಗೆದ್ದ ಈ ತಳಮಟ್ಟದ ಜನಾಂಗಗಳ ತರುಣರು ಕೋವಿಹಿಡಿದು ನಕ್ಸಲ್ ವಾದಕ್ಕೆ ಶರಣಾಗುತ್ತಿರುವುದರಲ್ಲಿ ಆಶ್ಚರ್ಯವೇನೂ ಇರದು. ಇದನ್ನು ಸರಿಪಡಿಸಬೇಕಾದರೆ ಈ ಜನರನ್ನು 'ಜ್ಞಾನ ಜಾಲ'ದೊಳಗೆ ಸೇರಿಸಿ ಅವರ ಜೀವನ ಭದ್ರತೆಯನ್ನು ಗಟ್ಟಿ ಮಾಡುವುದರತ್ತ ಇಂದು ಅವಶ್ಯವಾಗಿ ಯೋಚಿಸಬೇಕಾಗಿದೆ.

ಹೀಗೆ, ತಳಮಟ್ಟದ ಜನರ 'ಜ್ಞಾನ ಜಾಲ' ಆಧಾರಿತ ಅಭಿವೃದ್ಧಿ ಮಾದರಿಯೊಂದನ್ನು ನಾವಿಂದು ಹುಡುಕಬೇಕಾಗಿದೆ. ಇದು ಕಾರ್ಯರೂಪಕ್ಕೆ ಬರಲು ಬರಿದೆ ಸರ್ಕಾರ ತೀರ್ಮಾನಿಸಿದರೆ ಸಾಲದು. ಹಾಗೇ ಪೂರ್ತಿ ಮಾರುಕಟ್ಟೆಗೆ ಬಿಟ್ಟರಂತೂ, ಅದರಿಂದ ಮತ್ತಷ್ಟು ಅಪಾಯ. ಸರ್ಕಾರ, ಮಾರುಕಟ್ಟೆಗಳ ಜೊತೆಗೆ ತಳ ಮಟ್ಟದ ಸಂಘಟನೆಗಳು ಸೇರಿದರೆ ಮಾತ್ರ ಸರ್ಕಾರವನ್ನು ಬಡಿದೆಬ್ಬಿಸಿ, ಜಾಗತೀಕರಣ ಶಕ್ತಿಗಳಿಗೆ ಕಡಿವಾಣ ಹಾಕಿ, ಈ ತಳ ಮಟ್ಟದ ಜ್ಞಾನ ಜಾಲದ ಮೂಲಕ ಅದರ ನೈಜ ವಾರಸುದಾರರಿಗೆ ಜೀವನ ಭದ್ರತೆಯ ಭದ್ರ ಅಡಿಪಾಯ ಹಾಕುವ ಸಾಧ್ಯತೆಯಿರುತ್ತದೆ. ಇಂತಹ ಪರ್ಯಾಯ ಅಭಿವೃದ್ಧಿ ಮಾದರಿಯನ್ನು ಹುಟ್ಟು ಹಾಕಿ ಗಟ್ಟಿ ಮಾಡುವಲ್ಲಿ, ಈ ಬಗ್ಗೆ ಕಾಳಜಿಯಿರುವ ವಿಜ್ಞಾನಿಗಳು, ಬುದ್ಧಿ ಜೀವಿಗಳು ಸ್ವಯಂ ಸೇವಾ ಸಂಸ್ಥೆಗಳೆಲ್ಲಾ ಕೈ ಜೋಡಿಸುವುದು ಇಂದಿನ ತುರ್ತು ಅಗತ್ಯವಾಗಿರುತ್ತದೆ.

ಡಾ। ಪ್ರಕಾಶ್ ಕಮ್ಮರಡಿ

ಅರಳೀಕಟ್ಟೆ

★ ಧಾರವಾಡದ ಕೃಷಿ ಮಾಧ್ಯಮ ಕೇಂದ್ರ ಸ್ಥಾಪಿಸಿರುವ **ರಾಜ್ಯ ಮಟ್ಟದ ಕೃಷಿ ಪತ್ರಿಕೋದ್ಯಮ ಪ್ರಶಸ್ತಿ**ಗೆ 2007 ನೇ ಸಾಲಿಗಾಗಿ ಬಾಲಚಂದ್ರ ಹೆಗಡೆ ಸಾಯಿಮನೆ, ರವಿಶಂಕರ ದೊಡ್ಡ ಮಾಣಿ ಹಾಗೂ ಗಿರೀಶ್ ಹೆಚ್.ಸಿ. ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ನವೆಂಬರ್ 25,2007 ರಂದು ಗದಗ ಜಿಲ್ಲೆ ಹುಲಕೋಟೆಯಲ್ಲಿರುವ ಕೆ.ಹೆಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದಿರುತ್ತದೆ.

★ **21 ನೇ ಶೋಧಯಾತ್ರೆ** ಮುಂದಿನ ಜೂನ್ 2 ರಿಂದ 9 ರವರೆಗೆ ಆಂಧ್ರದ ವಿಶಾಖಪಟ್ಟಣ ಜಿಲ್ಲೆಯಲ್ಲಿ ಬುರಾಗ್ರಾಮದಿಂದ ಪಡೆರು ವರೆಗೆ ನೆಡೆಯಲಿದೆ. ಆಸಕ್ತರು ನಿವೃತ್ತ ಬ್ರಿಗೇಡಿಯರ್ ಗಣೇಶಮ್ (040-27118555) ರನ್ನು ಸಂಪರ್ಕಿಸಬಹುದು.

ಹಿತ್ತಲ ಗಿಡದ ಸಂಪಾದಕ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿಯವರು ಹನಿ ಬೀ ಜಾಲದ ನೂತನ ಸಂಚಾಲಕರಾಗಿ ಆಯ್ಕೆಯಾಗಿರುತ್ತಾರೆ ಇವರಿಗೆ ಸಹಾಯಕರಾಗಿ *NIF* ನ ನಿತಿನ್ ಮೌರ್ಯ ಮತ್ತು ದೀಪಾ ತ್ರಿಪಾಠಿ, *SRISTI* ಯಿಂದ ರಮೇಶ್ ಪಾಟೀಲ್ ಮತ್ತು *GIAN* ನಿಂದ ಮಹೇಶ್ ಪಾಟೀಲ್‌ರನ್ನು ಆಯ್ಕೆ ಮಾಡಲಾಗಿದೆ.

ಕೆಂಪುಮೂತಿ ಕೀಟದ ನಿಯಂತ್ರಣ

ಕೆಂಪುಮೂತಿ ಕೀಟಗಳ *(Red headed catterpiller)* ಹಾವಳಿಯು ಮೂರು ವರ್ಷದ ತೆಂಗಿನ ಗಿಡಗಳಿಂದ ಹಿಡಿದು 15 ವರ್ಷಗಳವರೆಗಿನ ತೆಂಗಿನ ಮರಗಳಲ್ಲಿ ಕಂಡುಬರುತ್ತದೆ. ತೆಂಗಿನ ಸುಳಿ ಹಾಗೂ ಬೇರುಗಳನ್ನು ಕೊರೆದು ತಿನ್ನುವ ಈ ಕೀಟಗಳ ಜೀವನ ಚಕ್ರ 90 ರಿಂದ 95 ದಿನಗಳು. ಇವು 200 ರಿಂದ 250 ಮೊಟ್ಟೆಗಳನ್ನಿಡುತ್ತವೆ. ಜನವರಿ– ಫೆಬ್ರವರಿ ತಿಂಗಳ ಬಿಸಿಲಿನ ಶಾಖಕ್ಕೆ ಮೊಟ್ಟೆಗಳು ಒಡೆದು ಹೊರಬರುವ ಮರಿಗಳು ರಂಧ್ರದಿಂದಲೇ ಮರದ ಭಾಗವನ್ನು ತಿನ್ನುತ್ತಾ ಟೊಳ್ಳು ಮಾಡುತ್ತದೆ. ಈ ಕೀಟಗಳ ಹಾವಳಿಗೆ ಒಳಗಾದಂತಹ ಎಳೆ (ಮೂರದಿಂದ ಐದು ವರ್ಷದ) ಮರಗಳು ನೂಕಿದರೆ ಸಾಕು, ಬಿದ್ದೇ ಹೋಗುವಷ್ಟು ದುರ್ಬಲವಾಗಿರುತ್ತವೆ. ಕಾಯಿ ಬಿಡುವ ಮರಗಳಲ್ಲಾದರೆ ಗರಿಗಳು ಹಳದಿಯಾಗಿ, ತೆಂಗಿನ ಗೊನೆಗಳು ನೇತಾಡುತ್ತಲೇ ನೆಲ ಕಚ್ಚುತ್ತವೆ. ಇದಕ್ಕೆ ಹಾಸನದ ನಮ್ಮ ಸಾವಯವ ಕೃಷಿ ಋಷಿ ಬಸವರಾಜು ಸಂತೇಶಿವರವರು ಒಂದು ಪರಿಹಾರ ಕಂಡು ಹಿಡಿದಿರುವರು. ಮೊದಲು ಕೀಟಗಳು ತೆಂಗಿನ ಗಿಡ ಮರಗಳಿಗೆ ಹೋಗಿ ಸೇರಿಕೊಳ್ಳದಂತೆ ತಡೆಯಬೇಕು. ಇದಕ್ಕಾಗಿ ಬಸವರಾಜುರವರು ಕೆಂಪುಮೂತಿ ಕೀಟಗಳು ಆಕರ್ಷಣೆಗೊಳ್ಳುವಂತಹ ವಿಶಿಷ್ಟವಾದ ಕಷಾಯ ವೊಂದನ್ನು ತಯಾರಿಸಿದ್ದಾರೆ. ಈ ಕಷಾಯವನ್ನು ತಯಾರಿಸಲು ತೆಂಗಿನ ಹಸಿರು ಗರಿಯೊಂದರ ಗರಿಗಳನ್ನೆಲ್ಲಾ ಸವರಿ ತೆಗೆದು ಉಳಿಯುವ ದಿಂಡನ್ನು ಸಣ್ಣಗೆ ಕತ್ತರಿಸಿ ಪುಡಿ ಮಾಡಿಕೊಳ್ಳಬೇಕು. ಒಂದು ಲೀಟರ್ ನೀರಿಗೆ 100 ಗ್ರಾಂ ಬೆಲ್ಲ ಬೆರೆಸಿ ಅದಕ್ಕೆ ಹತ್ತು ಗ್ರಾಂ ಹೊಗೆಸೊಪ್ಪಿನ ಪುಡಿ ಸೇರಿಸಿ ಕಷಾಯ ತಯಾರಿಸಿಕೊಳ್ಳಲಾಗುವುದು. ಈ ಕಷಾಯಕ್ಕೆ ತೆಂಗಿನ ದಿಂಡಿನ ಪುಡಿಯನ್ನು ಮಿಶ್ರಣ ಮಾಡಬೇಕು. ಇಂತಹ ಮಿಶ್ರಣವನ್ನು ಒಂದು ಮಡಕೆಗೆ ಹಾಕಿ, ಮತ್ತೊಂದು ಮಡಕೆಯ ತಳಭಾಗದಲ್ಲಿ ರಂಧ್ರಮಾಡಿ, ಮಿಶ್ರಣ ಹಾಕಿರುವಂತಹ ಮಡಕೆಯ ಮೇಲೆ ಬೋರಲು ಹಾಕಬೇಕು. ಈ ರಂಧ್ರದ ಮೂಲಕ ಬರುವ ವಾಸನೆಗೆ ಕೀಟಗಳು ಆಕರ್ಷಿತವಾಗಿ, ಮಡಕೆಯಲ್ಲಿನ ಮಿಶ್ರಣವನ್ನು ತಿನ್ನಲು ಆರಂಭಿಸುತ್ತವೆ. ಈ ತರಹದ ಮಡಕೆಗಳನ್ನು ಒಂದು ಎಕರೆಯ ತೆಂಗಿನ ತೋಟದಲ್ಲಿ 3–4 ಕಡೆ ಇಡಬೇಕು. ಇದರಿಂದ ಕೀಟಗಳು ತೆಂಗಿನ ಮರಗಳತ್ತ ಹೋಗದೇ ಮಡಕೆಗಳಿಗೆ ಬಂದು ಸೇರುತ್ತವೆ. ಈ ಮಿಶ್ರಣಕ್ಕೆ ತಿಂಗಳಿಗೊಮ್ಮೆ ಬೆಲ್ಲದ ನೀರು ಮತ್ತು ಹೊಗೆಸೊಪ್ಪಿನ ದ್ರಾವಣ ಸೇರಿಸುತ್ತಿರಬೇಕು. ಈ ರೀತಿ ಮಾಡುವುದರಿಂದ ಕೆಂಪು ಮೂತಿ ಕೀಟಗಳ ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದೆಂದು ಬಸವರಾಜುರವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿ ಗೆ: ಬಿ. ಬಸವರಾಜು, ಸಂತೇಶಿವರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ –573131, ಫೋನ್ : 08176-239260ಗೆ ಸಂಪರ್ಕಿಸಬಹುದು.

ಕಾಯಿಕೊರಕದ ಹತೋಟಿ ಕ್ರಮಗಳು

ಹಿರಿಯೂರು ತಾಲೂಕಿನ ರೈತರಾಗಿರುವ ಸಿ. ಎಸ್. ತಿಪ್ಪೇರುದ್ರಯ್ಯನವರು ಸೂರ್ಯಕಾಂತಿಯ ಜೊತೆಗೆ ದ್ವಿದಳ ಧಾನ್ಯ ತೊಗರಿಯನ್ನು ಬಿತ್ತನೆ ಮಾಡಿದ್ದರು. ಸೂರ್ಯಕಾಂತಿ ಬೆಳೆ ಹಾಳಾದರೂ ಅಧಿಕ ಇಳುವರಿ ಕೊಡುವ ಜಿ.ಆರ್.ಜಿ–2 ತೊಗರಿ ತಳಿಯು ಅವರ ನಿರೀಕ್ಷೆಗೂ ಮೀರಿ ಚೆನ್ನಾಗಿ ಬೆಳೆದು ಕಾಯಿಗಳಿಂದ ತುಂಬಿಕೊಂಡವು. ಆದರೆ, ಕಾಯಿಗಳ ಜೊತೆಗೆ ಬಂದ ಕಾಯಿಕೊರಕ ಹುಳುಗಳು ತಿಪ್ಪೇರುದ್ರಯ್ಯನವರನ್ನು ಆತಂಕಕ್ಕೆ ತಳ್ಳಿತು. ಆಗ ರಾಸಾಯನಿಕಕ್ಕೆ ಮೊರೆ ಹೋಗದೇ ನೈಸರ್ಗಿಕ ವಿಧಾನದಿಂದಲೇ ಕಾಯಿಕೊರಕ ಹುಳುಗಳನ್ನು ನಿಯಂತ್ರಿಸಿದ ಯಶೋಗಾಥೆ ಅವರದು. ತಮ್ಮ 24 ಎಕರೆಯ ಹೊಲದಲ್ಲಿ, ಅಲ್ಲಲ್ಲಿ 50 ಗೂಟಗಳನ್ನು ನೆಟ್ಟು, ತಂತಿಗಳನ್ನು ಕಟ್ಟಿದರು. ಪಕ್ಷಿಗಳನ್ನು ಆಕರ್ಷಿಸಲು ಬಕೆಟ್‌ನಲ್ಲಿ ಅನ್ನ, ಮೊಸರು ಕಲಸಿ ನೇತು ಹಾಕಿದರು. ನೀರು ತುಂಬಿದ ಟಬ್‌ಗಳನ್ನು ತಂತಿಗೆ ಜೋತು ಬಿಟ್ಟರು. ಈ ರೀತಿ ಮಾಡಿದ್ದರಿಂದ ಐದಾರು ದಿನಗಳಲ್ಲಿ 300 ಕ್ಕೂ ಹೆಚ್ಚು ಪಕ್ಷಿಗಳು ಬಂದು ಶೇ. 80 ರಷ್ಟು ಕಾಯಿಕೊರಕ ಹುಳುಗಳನ್ನು ತಿಂದು ಹಾಕಿದವು. ಪರಿಸರ ಹಾನಿ ಮಾಡದೆ ಬೆಳೆಯನ್ನು ಉಳಿಸಿಕೊಳ್ಳುವ ಈ ವಿಧಾನದಿಂದ ರಾಸಾಯನಿಕ ಕೀಟನಾಶಕ ಬಳಸುವುದು ತಪ್ಪಿತಲ್ಲದೇ, ಹಣವೂ ಉಳಿಯಿತು ಎಂದು ತಿಪ್ಪೇರುದ್ರಯ್ಯ ಹೇಳುತ್ತಾರೆ.

ಮೂಲ : ಪ್ರಜಾವಾಣಿ, 20 ಡಿಸೆಂಬರ್ 2007

ಗುಜರಾತ್ ಜಿಲ್ಲೆಯ ಪಂಚಮಹಲ್‌ನ, ಕಾಲೋಳ್ ನಗರದ ರಮನ್‌ಭಾಯಿ ಯವರು ಕಾಯಿ ಕೊರಕಕ್ಕೆ ಮತ್ತೊಂದು ಕ್ರಮ ಅನುಸರಿಸುತ್ತಿರುವರು. ಇವರು ನೀಲಗಿರಿ, ಹೊಗೆಸೊಪ್ಪು, ಬೇವು ಮತ್ತು ಗರುಗದ ಗಿಡ ಇವುಗಳ ಎಲೆಗಳನ್ನು ತಲಾ 500 ಗ್ರಾಂಗಳಂತೆ ತೆಗೆದುಕೊಂಡು ಅರೆಯುತ್ತಾರೆ. ನಂತರ ಈ ಮಿಶ್ರಣವನ್ನು 20 ಲೀಟರ್ ನೀರಿನಲ್ಲಿ, ಕಾಲು ಭಾಗ ಬರುವವರೆಗೂ ಕುದಿಸಿ ಕೊಳ್ಳುತ್ತಾರೆ. ಬಂದಿರುವ ಕಷಾಯವನ್ನು ಸೋಸಿ, ರೋಗದಿಂದ ಬಾಧಿತವಾಗಿರುವ ಬೆಳೆಗಳಿಗೆ ದಿನಕ್ಕೆ ಎರಡು ಬಾರಿಯಂತೆ ಆರು ದಿನಗಳವರೆಗೆ ಸಿಂಪಡಿಸುತ್ತಾರೆ. ಇದರ ಪರಿಣಾಮವಾಗಿ ಕಾಯಿಕೊರಕ ಕಾಟವನ್ನು ನಿಯಂತ್ರಿಸಬಹುದಂತೆ.

ವಿ. ಸೂ : ನೀಲಗಿರಿಯು ಕೀಟನಾಶಕ, ನಂಜುನಾಶಕ ಮತ್ತು ನೋವು ಪರಿಹಾರಕವಾಗಿ ಕೆಲಸ ಮಾಡುತ್ತದೆ. ಅಲ್ಲದೆ ಸೂಕ್ಷ್ಮಾಣು ಜೀವಿ ಪೀಡೆಗಳ ವಿರೋಧಿಯಾಗಿದೆ. (ವಿವರಗಳನ್ನು web address-http:// www.simply natural direct.com/index ನೋಡಿ.) ಹಾಗೆ, ಹೊಗೆಸೊಪ್ಪಿನಲ್ಲಿರುವಂತಹ ಸಂಯುಕ್ತ ರಾಸಾಯನಿಕ ವಸ್ತುವು ಪ್ರಾಕೃತಿಕ ವಾಗಿಪರಿಣಾಮಕಾರಿಯಾದಂತಹ ಸುರಕ್ಷಿತವಾದ ಕೀಟ ನಾಶಕವಾಗಿ ಗಿಡಗಳಿಗೆ ತಗಲುವ ರೋಗಗಳ ಮೇಲೆ ಕೆಲಸ ಮಾಡುತ್ತದೆ. (ವಿವರಕ್ಕೆ *web address- http:www.free patents online.com/5260281.hyml* ನೋಡಿ). ಬೇವು ತನ್ನಲ್ಲಿರುವ, ಕ್ರಿಮಿ ಮತ್ತು ಕೀಟನಾಶಕ ಗುಣಗಳನ್ನು ಹೊಂದಿರುವುದರಿಂದ, ಇದು ಸಾಮಾನ್ಯವಾಗಿ ಹಲವು ರೋಗಗಳಿಗೆ ಬಳಸಲ್ಪಡುತ್ತಿದೆ. (ವಿವರಕ್ಕೆ *web address http:www.nrdcindia.com/pages/numpest* ನೋಡಿ).

ಬಾಳೆಗಿಡಗಳ ಗೊನೆ ರೋಗ ಹತೋಟಿ

ಬಾಳೆಗಿಡಗಳಲ್ಲಿ ಕಂಡು ಬರುವ ಗೊನೆ ರೋಗವು, ಬಾಳೆಗೊನೆ ವೈರಸ್ ಕೀಟಾಣುವಿನಿಂದ ಹರಡುತ್ತದೆ. ಇಂತಹ ರೋಗಕ್ಕೆ ಈಡಾದ ಗಿಡವು ಗೊಂಚಲಾಗಿ, ಸಂಕುಚಿತಗೊಂಡು, ಅಂಚುಗಳೆಲ್ಲಾ ಹಳದಿಯಾಗುತ್ತವೆ ಮತ್ತು ನೇರವಾಗಿ ಮರಗಟ್ಟಿದಂತಿರುತ್ತದೆ. ಕೇರಳದ ಪಲೂರ್ಕವು ನಗರದವರಾದ, ಜಾರ್ಜರವರು ಹುರಿದ ಮೆಂತ್ಯೆಕಾಳುಗಳನ್ನು *(Trigonella foenum -graecum)* ಗಿಡದ ತಿರುಳಿನಲ್ಲಿ ಹಾಕಿದರೆ, ಈ ರೋಗವನ್ನು ತಡೆಹಿಡಿಯಬಹುದು ಎಂದು ಹೇಳಿದ್ದಾರೆ.

ಕಾಯಿಗಳು ಉದುರುವುದನ್ನು ತಡೆಯಲು ಮರಕ್ಕೆ ಮೊಳೆ !

ಸುಣ್ಣದ ಮತ್ತು ಕ್ಷಾರದ ಭೂಮಿಯಲ್ಲಿ ಬೆಳೆಯುವ ಹಣ್ಣಿನ ಗಿಡಗಳಲ್ಲಿ ಕಬ್ಬಿಣಾಂಶದ ಕೊರತೆಯಿರುತ್ತದೆ. ಇದರ ಕೊರತೆಯು ಪತ್ರಹರಿತ್ತಿನ, ಸಸ್ಯಗಳ ಬೆಳವಣಿಗೆ ಮತ್ತು ಜೀವರಾಸಾಯನಿಕಗಳ ಮೇಲೆ ಪರಿಣಾಮ ಬೀರುತ್ತದೆ. ಈ ರೀತಿಯ ತೊಂದರೆಯನ್ನು ತಡೆಯಲು ಕೇರಳದ ಪಲೂರ್ಕವು ನಗರದವರಾದ ಜಾರ್ಜರವರು ಕಬ್ಬಿಣದ ಮೊಳೆಗಳನ್ನು ಮರದ ಬುಡಗಳಿಗೆ ಚುಚ್ಚಿ ಎಳೆಯ ಕಾಯಿಗಳು ಬೀಳುವುದನ್ನು ಹತೋಟಿಯಲ್ಲಿಡಬಹುದು ಎಂದು ತಿಳಿಸಿದ್ದಾರೆ.

ಮೂಲ : ಹನಿ ಬೀ Vol 18 (2) ಏಪ್ರಿಲ್ – ಜೂನ್ 2007.

ಲಾಂಟಾನಾ ಕಳೆಯ ಉಪಯೋಗಗಳು

ಗಿಡವಿದ್ದರೆ ತೊಂದರೆಯಾಗುತ್ತದೆ ಎಂಬ ಭಾವನೆಯು ಲಂಟಾನದ ಹೊರತು ಬೇರೆ ಯಾವ ಗಿಡದಿಂದಲೂ ಬಂದಿರಲಾರದು. ಜಗತ್ತಿನ ಹತ್ತು ಅತ್ಯಂತ ಉಪದ್ರಕಾರಿ ಕಳೆಗಳಲ್ಲಿ ಲಂಟಾನಾ ಕೂಡ ಒಂದೆಂದು ನಿರ್ಣಯಿಸಲಾಗಿದೆ . ಈ ಗಿಡವನ್ನು ಬ್ರಿಟಿಷರು 1807 ರಲ್ಲಿ ಅಲಂಕಾರಿಕ ಗಿಡವಾಗಿ ಭಾರತಕ್ಕೆ ಪರಿಚಯಿಸಿದರು. ಅದೇ ಗಿಡ ಈಗ ಕಳೆಯಾಗಿ ದೇಶದ ಎಲ್ಲ ಪ್ರದೇಶಗಳಲ್ಲಿ ಹರಡಿಕೊಂಡಿದೆ. ಅರಣ್ಯ ಇಲಾಖೆ ಹಾಗೂ ರೈತರು ಈ ಕಳೆಯನ್ನು ಕಾಡುಗಳಲ್ಲಿ ಮತ್ತು ಕೃಷಿ ಭೂಮಿಗಳಲ್ಲಿ ಹಬ್ಬಿಕೊಳ್ಳದ ಹಾಗೆ ನಿಯಂತ್ರಿಸಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಯಾವುದನ್ನು ನಾಶಪಡಿಸಲಾಗುವುದಿಲ್ಲವೋ ಅದನ್ನು ಉಪಯೋಗಿಸುವುದೇ ಉತ್ತಮ ಎಂಬ ಒಂದು ನಾಣ್ಣುಡಿ ಇದೆ. ಇದಕ್ಕೆ ಪೂರಕವಾಗಿ ಕೆಲ ಬುಡಕಟ್ಟು ಜನಾಂಗಗಳು ಇತ್ತೀಚೆಗೆ ಈ ಕಳೆಯನ್ನು ಬಳಸಿಕೊಳ್ಳುವ ಪ್ರಾವೀಣ್ಯತೆಯನ್ನು ಬೆಳಸಿಕೊಂಡಿದ್ದಾರೆ. ದಕ್ಷಿಣ ಭಾರತದ ಸೋಲಿಗ ಮತ್ತು ಕೊರವ ಬುಡಕಟ್ಟು ಜನಾಂಗದವರು ತಮ್ಮ ಕುಲಕಸುಬಾಗಿ ಬಂದಿರುವಂತಹ ಬಿದಿರಿನ ಉತ್ಪನ್ನಗಳನ್ನು ತಯಾರಿಸುವ ಕೆಲಸಗಳಲ್ಲಿ ಬಿದಿರಿನ ಬದಲಿಗೆ ಲಂಟಾನ ಬಳಸಲು ಆರಂಭಿಸಿದ್ದಾರೆ. ಕುರ್ಚಿ, ಮೇಜು, ಬುಟ್ಟಿ , ಹೀಗೆ ಬೆತ್ತದಿಂದ ತಯಾರಿಸಲ್ಪಡುವ ಹತ್ತಾರು ಉತ್ಪನ್ನಗಳನ್ನು ಬಿದಿರಿನ ಬದಲಿಗೆ ಲಂಟಾನ ಬಳಸಿ ತಯಾರಿಸುತ್ತಿದ್ದಾರೆ. ಇದರ ಬಳಕೆಯಿಂದ ಎರಡು ರೀತಿಯ ಪ್ರಯೋಜನಗಳಾಗಿವೆ. ಮೊದಲನೆಯದಾಗಿ ಲಂಟಾನ ಕಳೆಯು ಹಲವು ಜನರ ಜೀವನಾಧಾರವಾಗಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಕಾರಣವಾಗಿದೆ. ಹಾಗೂ ಹೊಲಗಳಲ್ಲಿ ಮತ್ತು ಕಾಡುಗಳಲ್ಲಿ ಲಂಟಾನ ಕಳೆಯನ್ನು ನಿಯಂತ್ರಿಸಿ , ಪರಿಸರ ಜೀವ ವೈವಿಧ್ಯತೆಯನ್ನು ರಕ್ಷಣೆ ಮಾಡಲೂ ಸಹಾಯವಾಗಿದೆ. ಇದರ ಬಳಕೆಯು ಬೇರೆ ಬುಡಕಟ್ಟು ಜನಾಂಗಗಳಿಗೂ ಕೂಡ ಪ್ರಸಾರವಾಗಬೇಕು ಎನ್ನುವ ಕಾರಣಕ್ಕಾಗಿ ಬೆಂಗಳೂರಿನಲ್ಲಿರುವ ಏಟ್ರಿ (*ATREE-Ashoka Trust for Research in Ecology and the Environment)* ಸಂಸ್ಥೆ ಒಂದು ವಿವರವಾದ ಕರಪತ್ರವನ್ನು ಹೊರತಂದಿರುತ್ತದೆ.

ಲಂಟಾನ ಉತ್ಪನ್ನಗಳಿಂದ ಬಂದಿರುವ ಲಾಭವು ಬುಡಕಟ್ಟುಗಳ ಕಸಬುದಾರರಿಗೆ ಮತ್ತು ಅವರ ಸಮುದಾಯಗಳ ಜೀವನ ಭದ್ರತೆ ಗಟ್ಟಿಮಾಡಲು ಸಹಕಾರಿಯಾಗಿದೆ. ಇದರಿಂದ ಲಂಟಾನ ಉದ್ಯಮಶೀಲತೆಗೆ ಉತ್ತೇಜನ ಕೊಟ್ಟಂತಾಗುವುದಲ್ಲದೇ ಪರಂಪರೆಯಿಂದ ಬಂದಿರುವ ಕಸಬುದಾರರ ಜೀವನಾಧಾರವು ಸುಧಾರಿಸುತ್ತದೆ. ಜೊತೆಗೆ ಪರಿಸರ, ಜೀವ ವೈವಿಧ್ಯತೆಗಳ ನಾಶ ತಪ್ಪಿ ಅವುಗಳ ರಕ್ಷಣೆ ಮಾಡಿದಂತಾಗುತ್ತದೆ.ಆಸಕ್ತಿಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು.

ಅಶೋಕ ಟ್ರಸ್ಟ್ ಫಾರ್ ರೀಸರ್ಚ್ ಇನ್ ಎಕಾಲಜಿ ಅಂಡ್ ದ ಎನ್‌ವಿರಾನ್‌ಮೆಂಟ್ (ATREE) , 659, 5 ಮೇನ್ ರೋಡ್, ಹೆಬ್ಬಾಳ, ಬೆಂಗಳೂರು – 560024, ಫೋನ್ – 080 23530069, 23533942, 23638771.

ಡ್ರಿಪ್ ಪೈಪಿನ ಬುಟ್ಟಿಗಳು

ಅಡಿಕೆಯ ಕೃಷಿ , ಸಂಸ್ಕರಣೆಗೆ ಬೇಕಾಗುವ ಬುಟ್ಟಿ , ಹೆಡಿಗೆ , ಚುಳಿ (ಕಲ್ಲಿ) ಗಳೆಲ್ಲ ಬೆತ್ತದಿಂದ ತಯಾರಿಸಲಾಗುತ್ತದೆ . ಇವುಗಳೆಲ್ಲ ಅಡಿಕೆ ಕೃಷಿಯ ಕಠಿಣ ಕೆಲಸಗಳಲ್ಲಿ ಬೇಗ ಹಾಳಾಗುತ್ತವೆ .ಇದಕ್ಕೆ ಪರಿಹಾರವಾಗಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಕೆರೆಗದ್ದೆ ಗಣಪತಿ ಹೆಗಡೆ ಅವರು, ಕಡಿಮೆ ವೆಚ್ಚದಲ್ಲಿ ದೀರ್ಘಕಾಲ ಬಾಳಿಕೆ ಬರುವ ಡ್ರಿಪ್ ಪೈಪಿನ ಬುಟ್ಟಿ, ಹೆಡಿಗೆ, ಕಲ್ಲಿಗಳನ್ನು ತಯಾರಿಸಿರುತ್ತಾರೆ. ಇವರು 2001ರಲ್ಲಿ ತಯಾರಿಸಿರುವ ಡ್ರಿಪ್ ಪೈಪ್ ಬುಟ್ಟಿಯು ಇಂದಿಗೂ ಬಳಕೆಯಲ್ಲಿದೆ . ಸ್ವಲ್ಪ ಹುಷಾರಿನಿಂದ ನೋಡಿಕೊಂಡರೆ ಈ ಬುಟ್ಟಿಗಳು 8 –10 ವರ್ಷ ಬಾಳಿಕೆ ಬರುತ್ತವೆಯಂತೆ. ಹೆಗಡೆಯವರು ಡ್ರಿಪ್ ಪೈಪ್ ಮತ್ತು ಈ ಪೈಪಿನೊಳಗೆ ತೂರಿಸಲು ಜಿ.ಐ ದರ್ಜೆಯ ಕಬ್ಬಿಣದ ತಂತಿಯನ್ನು ಚುಳಿ ತಯಾರಿಸಲು ಬಳಸುತ್ತಾರೆ. 250 ರಿಂದ 300ರೂ. ಬೆಲೆ ಇರುವ ಒಂದು ಚುಳಿ ತಯಾರಿಸಲು ಹೆಗಡೆಯವರು ಮೂರುವರೆ ಗಂಟೆ ಸಮಯ ತೆಗೆದುಕೊಳ್ಳುತ್ತಾರೆ. ಇವರು ತಯಾರಿಸಿ ಕೊಟ್ಟಿರುವ ಚುಳಿಗಳ ಸಂಖ್ಯೆ ನೂರಕ್ಕೂ ಹೆಚ್ಚು . ಅದೇ ರೀತಿ ಬುಟ್ಟಿ ತಯಾರಿಕೆಗೆ ಪೈಪನ್ನು ನಾಲ್ಕು ಭಾಗವಾಗಿ ಸೀಳಿಕೊಂಡು ನಂತರ ಹೆಣಿಗೆ ಮಾಡುತ್ತಾರೆ. ಡ್ರಿಪ್ ಪೈಪಿನಿಂದ ಚಾಪೆಯನ್ನು ಸಹ ಯಾವ ಚೌಕಟ್ಟನ್ನು ಅಳವಡಿಸಿಕೊಳ್ಳದೆ ತಯಾರಿಸುತ್ತಾರೆ.

ಆಸಕ್ತರು ಹೆಚ್ಚಿನ ಮಾಹಿತಿಗೆ ಕೆರೆಗದ್ದೆ ಗಣಪತಿ ಹೆಗಡೆಯವರನ್ನು ಫೋನ್: 08389–249322 ಮುಖಾಂತರ ಸಂಪರ್ಕಿಸಬಹುದು .

ಮೂಲ : ಪ್ರಜಾವಾಣಿ , ಮಾರ್ಚ್ 1, 2007,

ಮಂಜುನಾಥ ಪಂಚಾನರ ಅನುಶೋಧನೆಗಳು

ಬಡಗಿತನವನ್ನೇ ವೃತ್ತಿಯಾಗಿಸಿಕೊಂಡಿರುವ ಬ್ಯಾಡಗಿ ತಾಲ್ಲೂಕಿನ ಚಿಕ್ಕ ಬಾಸೂರಿನ ಮಂಜುನಾಥರವರು ಓದಿದ್ದು ಎಸ್.ಎಸ್.ಎಲ್.ಸಿ. ಮತ್ತು ಎಲೆಕ್ಟ್ರಿಕಲ್ ವಿಷಯದಲ್ಲಿ ಡಿಪ್ಲೊಮಾ. ಒಮ್ಮೆ ತರಬೇತಿಗಾಗಿ ದೆಹಲಿಗೆ ಹೋದಾಗ ವಿದ್ಯುತ್ ಉಪಕರಣಗಳಲ್ಲಿ ವಿವಿಧ ಮಾದರಿಗಳನ್ನು ಸಿದ್ಧಪಡಿಸುವುದನ್ನು ಕಂಡು, ಬೆರಗಾಗಿ ತಾನೂ ಕೂಡ, ಏನಾದರೂ ಹೊಸತು ಸಾಧಿಸಬೇಕು ಎನ್ನುವ ಛಲದಿಂದ ಇಂತಹ ಒಲೆಯನ್ನು ಸಿದ್ಧಪಡಿಸಿದ್ದಾರೆ. ಮಂಜುನಾಥ ಸಿದ್ಧಪಡಿಸಿರುವ ಒಲೆಯನ್ನು ಸತತ ಒಂದು ಗಂಟೆ ಉಪಯೋಗಿಸಿದರೆ ಒಂದು ಯೂನಿಟ್ ವಿದ್ಯುತ್ ಖರ್ಚಾಗುತ್ತದೆ. ಇದು ಕಡಿಮೆ ವಿದ್ಯುತ್ ಬಳಕೆ, ಆಹಾರದ ಪೌಷ್ಠಿಕಾಂಶದ ರಕ್ಷಣೆ, ಶಾಕ್ ಹೊಡೆಯುವುದರಿಂದ ಮುಕ್ತ, ಕೊಂಡೊಯ್ಯಲು ಸುಲಭ. ಎರಡು ಪಿನ್ ಪ್ಲಗ್‌ನಲ್ಲಿಯೇ ಕೆಲಸ ಮಾಡುತ್ತದೆ. ಶೇ.40 ರಷ್ಟು ವಿದ್ಯುತ್ ಉಳಿತಾಯ ಮಾಡಬಹುದು. ಈ ಒಲೆಯಲ್ಲಿ ಅಡುಗೆ ಮಾಡಿದಾಗ ಪಾತ್ರೆ ಬಿಸಿಯಾಗುವುದಿಲ್ಲ, ಮಸಿಯಾಗುವುದಿಲ್ಲ, ಬೆಂಕಿ ಕಣ್ಣಿಗೆ ಕಾಣುವುದಿಲ್ಲ, ಹೊಗೆಬರುವುದಿಲ್ಲ , ಬಿಸಿಯನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಒಲೆಯನ್ನು ಆನ್ ಮಾಡಿ ಮರೆತರೆ ತನ್ನಿಂದ ತಾನೆ ಅದು ಆಫ್ ಆಗುವ ವ್ಯವಸ್ಥೆ ಕೂಡ ಇದೆ. ಅಡುಗೆ ಅನಿಲದ ಒಲೆಯಲ್ಲಿ ಅರ್ಧ ಕಿಲೋ ಅಕ್ಕಿ ಬೇಯಲು 25 ನಿಮಿಷ ಬೇಕಾದರೆ ಮ್ಯಾಜಿಕ್ ಒಲೆಯಲ್ಲಿ ಕೇವಲ 10 ನಿಮಿಷ ಸಾಕು. ಕಾಲು ಕೆ.ಜಿ. ಬೇಳೆ ಬೇಯಲು ಗ್ಯಾಸ್ ಒಲೆಯಲ್ಲಿ 20 ನಿಮಿಷ ಬೇಕು. ಆದರೆ ಈ ಒಲೆಯಲ್ಲಿ 5 ನಿಮಿಷ ಸಾಕು. ಹೀಗೆ ಅತಿ ಕಡಿಮೆ ಅವಧಿಯಲ್ಲಿ ಅಡುಗೆಗಳನ್ನು ತಯಾರಿಸುವಂತಹ ಇಂತಹ ಒಲೆಯನ್ನು ಎಲ್ಲ ಜಿಲ್ಲೆಗಳಲ್ಲಿ ಪ್ರದರ್ಶನ ಮಾಡಿರುವ ಅವರು ರಾಜ್ಯದ ಅನೇಕ ಕಡೆ ಮಾರಾಟ ಮಾಡಿದ್ದಾರೆ. ಇದರ ಬೆಲೆ 5 ಸಾವಿರ ರೂಪಾಯಿಗಳು.

ಹಾಗೇ ಪಂಚಾನನ ಅವರು, ಮನೆಯ ಹೊರಗಡೆ ಕಾಲಿಂಗ್ ಬೆಲ್ ಮಾಡಿದವರ ಮುಖ ಮನೆಯ ಒಳಗಡೆ ಇರುವ ಚಿಕ್ಕ ಟಿ.ವಿ. ಯಲ್ಲಿ ನೋಡಬಹುದಾದಂತಹ ಕಾಲಿಂಗ್ ಬೆಲ್ ತಯಾರಿಸಿದ್ದಾರೆ. ಮನೆಯವರ ಸುರಕ್ಷತೆಯ ದೃಷ್ಟಿಯಿಂದ ಇದು ಒಳ್ಳೆಯದು. ಇದರ ಬೆಲೆ ಕೂಡ 5 ಸಾವಿರ ರೂಪಾಯಿಗಳು. ವ್ಯಾಯಾಮ ಇಲ್ಲದೆ ದೇಹದ ತೂಕ ಹಾಗೂ ಕ್ಯಾಲೋರಿ ಕಡಿಮೆ ಮಾಡಿಕೊಳ್ಳುವ ಸೋನಾ ಯಂತ್ರವನ್ನು , ಬಾಡಿ ಮಸಾಜ್ ಮಾಡುವ ಯಂತ್ರವನ್ನು ಮತ್ತು ಸತತ ಐದು ನಿಮಿಷ ಚಾರ್ಜ ಮಾಡಿದರೆ ಐದು ಜೊತೆ ಬಟ್ಟೆಗಳನ್ನು ಇಸ್ತ್ರಿ ಮಾಡುವ ಐರನ್ ಬಾಕ್ಸ್‌ನ್ನು ಅವರು ತಯಾರಿಸಿದ್ದಾರೆ. ಹೊಸತನ್ನು ಸೃಷ್ಟಿಸುತ್ತಲೇ ಇರುವ ಪಂಚಾನನ ಅವರಿಗೆ ಇನ್ನಷ್ಟು ಸಾಧನೆ ಮಾಡುವ ಹಂಬಲವಿದೆ.

ಪಂಚಾನರ ದೂರವಾಣಿ ಸಂಖ್ಯೆ : 08375 329778,9900437066
ಮೂಲ : ಉದಯವಾಣಿ, 19 ನವೆಂಬರ್ 2007.

ಹಸುವಿನ ಕೆಚ್ಚಲು ಗುಳ್ಳೆಗಳಿಗೆ ಚಿಕಿತ್ಸೆ

ಹಾಲು ಕೊಡುವ ಹಸುಗಳ ಕೆಚ್ಚಲಿನಲ್ಲಿ ಹಲವಾರು ಬಾರಿ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಹಾಸನ ಜಿಲ್ಲೆಯ, ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರದ ಬಿ. ಬಸವರಾಜುರವರು ಇದಕ್ಕೊಂದು ಔಷಧಿಯ ಸಲಹೆ ನೀಡಿದ್ದಾರೆ. ಒಂದು ಚಮಚ ಸೀಗೇಪುಡಿ, ಒಂದು ಚಮಚ ಅರಿಸಿನ ಪುಡಿ, ಹಾಗೂ ಒಂದು ಚಮಚ ಅಡಿಗೆ ಉಪ್ಪು ಈ ಮೂರಕ್ಕೆ ನೀರನ್ನು ಮಿಶ್ರಣ ಮಾಡಿ ಲೇಹದ ರೀತಿಯಲ್ಲಿ ತಯಾರಿಸಿಕೊಳ್ಳಬೇಕು. ಹಾಲು ಕರೆದ ನಂತರ ಕೆಚ್ಚಲನ್ನು ನೀರಿನಿಂದ ತೊಳೆದು, ಲೇಹವನ್ನು ಲೇಪಿಸುತ್ತಾ ಬಂದರೆ 15 – 20 ದಿನಗಳಲ್ಲಿ ಕೆಚ್ಚಲಿನ ಮೇಲಿರುವ ಗುಳ್ಳೆಗಳು ಕಾಣೆಯಾಗುತ್ತವೆಯಂತೆ. ಇದರಿಂದ ಹಸುಗಳಿಗೆ ಯಾವುದೇ ರೀತಿಯ ತೊಂದರೆಗಳಾಗುವುದಿಲ್ಲ ಮತ್ತು ಕೆಚ್ಚಲು ಬಾವು ಬರದಂತೆ ನಿಯಂತ್ರಿಸುವ ಶಕ್ತಿ ಈ ಲೇಹಕ್ಕೆ ಇದೆ ಎಂದು ಬಸವರಾಜುರವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಬಿ.ಬಸವರಾಜು ಸಂತೇಶಿವರ ಅವರನ್ನು ಫೋನ್ ನಂ : 08176–239260 ರ ಮೂಲಕ ಸಂಪರ್ಕಿಸಬಹುದು.

ಕೀಲುನೋವುಗಳಿಗೆ ಆಡುಸೋಗೆ

ಹಸುಗಳ ಸ್ನಾಯು ಹಾಗು ಕೀಲು ನೋವುಗಳಿಗೆ ಗುಜರಾತಿನ, ಸಬರಕಾಂತ ನಗರದ ರೇವಭಾಯಿಯವರು 250 ಗ್ರಾಂ ಆಡುಸೋಗೆಯನ್ನು (*Adhatoda vasica Nees*) ಎರಡು ಲೀಟರ್ ನೀರಿನಲ್ಲಿ ಕುದಿಸಿಕೊಳ್ಳುತ್ತಾರೆ. ಈ ಕಷಾಯವನ್ನು 100 ಗ್ರಾಂ ನಂತೆ, ದಿನಕ್ಕೆ ಎರಡು ಬಾರಿ ಐದು ದಿನಗಳವರೆಗೆ ಹಸುವಿಗೆ ಕೊಡುವರು. ಈ ಕಷಾಯದ ಜೊತೆಗೆ 250–300 ಗ್ರಾಂ ನಷ್ಟು ಬೆಲ್ಲವನ್ನು ಕೂಡಾ ಕೊಡುತ್ತಾರೆ ಮತ್ತು ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಹೀಗೆ ಮಾಡುವುದರಿಂದ ಹಸುಗಳು ನೋವುಗಳಿಂದ ವಿಮುಕ್ತವಾಗುತ್ತವೆ ಎಂದು ಹೇಳಿದ್ದಾರೆ.

ಹಸುಗಳ ಮಲ ಬದ್ಧತೆಗೆ ಬದನಿಕೆಯ ಬಳಕೆ

ಗುಜರಾತ್ ಜಿಲ್ಲೆಯ ಪಂಚಮಹಲ್ ನಗರದ ರಾಜು ಭಾಯಿಯವರು 300 ಗ್ರಾಂ ಬದನಿಕೆಯನ್ನು (*Cuscuta reflexa Roxb*) ಒಂದು ಲೀಟರ್ ನೀರಿನಲ್ಲಿ ಅರೆದುಕೊಂಡು ಹಸುವಿಗೆ ಕುಡಿಸುತ್ತಾರೆ. ಇದರಿಂದ ಅವುಗಳ ಅಜೀರ್ಣತೆ ಮತ್ತು ಮಲಬದ್ಧತೆಯು ನಿವಾರಣೆಗೊಳ್ಳುತ್ತದೆ ಎಂದು ಹೇಳಿದ್ದಾರೆ.

ಕುರಿಗಳಿಗೆ ಗಿಡ ಮೂಲಿಕೆಗಳ ಆರೈಕೆ


ತಮಿಳು ನಾಡಿನ ಪೊನ್ನು ಸ್ವಾಮಿಯವರು ಕರುಳಿನ ಸ್ರಾವ ಮತ್ತು ಮಲಬದ್ಧತೆಯಿಂದ ನರಳುತ್ತಿರುವ ಕುರಿಗಳಿಗೆ ತೊಟ್ಲಗಿಡದ (*Jatropha glandulifera Roxb.*) ಕಷಾಯವನ್ನು ಕುಡಿಸುತ್ತಾರೆ, ಮತ್ತು ಹಾಲಿನ ಉತ್ಪತ್ತಿಯನ್ನು ಹೆಚ್ಚಿಗೆ ಮಾಡುವುದಕ್ಕಾಗಿ ಇವರು ಅಚ್ಚೆಗಿಡವನ್ನು (*Euphorbia hirta*) ತಮ್ಮ ಕುರಿಗಳಿಗೆ ಕೊಡುತ್ತಾರೆ.

ಮೂಲ; ಹನಿ ಬೀ, Vol 17 (4) ಮತ್ತು 18 (1) ಅಕ್ಟೋಬರ್ – ಡಿಸೆಂಬರ್ 2006 ಮತ್ತು ಜನವರಿ – ಮಾರ್ಚ 2007.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿದುತ್ತವೆ. ರೂ. 600/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಪ್ರಾಣಿಗಳಲ್ಲಿ ಅತಿಸಾರಕ್ಕೆ ಕಬ್ಬಿನ ಹಾಲಿನ ಬಳಕೆ

ಒರಿಸ್ಸ ರಾಜ್ಯದ ಪಲ್ಲಾಹಾರ ನಗರದ ಕಾಲಿಯ, ಇವರು ಹಸುಗಳ ಅತಿ ಬೇಧಿಯನ್ನು ತಡೆಯಲು 100 ಗ್ರಾಂ ಅರಿಶಿಣವನ್ನು ಮತ್ತು 100 ಗ್ರಾಂ ಮೂರು ವರ್ಷ ಹಳೆಯದಾದ ಕಬ್ಬಿನ ಕಾಕಂಬಿ (*Molasses*) ಮಿಶ್ರಣ ಮಾಡಿ, ದಿನಕ್ಕೆ ಒಂದು ಸಾರಿಯಂತೆ ಏಳು ದಿನಗಳವರೆಗೆ ಕೊಡುತ್ತಾರೆ. ಇದರಿಂದ ಅತಿಸಾರವು ನಿಯಂತ್ರಣಗೊಂಡು, ಹಸುಗಳು ನಿಶ್ಯಕ್ತತೆಯಿಂದ ಚೇತರಿಸಿಕೊಳ್ಳುತ್ತವೆ ಎಂದು ತಿಳಿಸಿದ್ದಾರೆ.



ಕಾಲುಬಾಯಿ ರೋಗಕ್ಕೆ ಕರ್ಪೂರದ ಚಿಕಿತ್ಸೆ

ಒರಿಸ್ಸ ರಾಜ್ಯದ ಬೊನೈಗರ್ ನಗರದ ಹೇಮಂತ್ ಕೆ.ಸಾಹುರವರು ಮೂರು ಕರ್ಪೂರದ ಬಿಲ್ಲೆಗಳನ್ನು ಮಡಿಕೆಯಲ್ಲಿ ತೆಗೆದುಕೊಂಡು, ಇದಕ್ಕೆ 100 ಗ್ರಾಂ ಅಡಿಗೆ ಸೋಡಾ ಮತ್ತು 200 ಗ್ರಾಂ ಮದ್ಯಸಾರವನ್ನು ಸೇರಿಸುತ್ತಾರೆ. ಈ ಮಿಶ್ರಣದಿಂದ ಕಾಲು ಬಾಯಿ ರೋಗದ ಗಾಯಗಳಿಗೆ ದಿನಕ್ಕೆ ಒಂದು ಸಾರಿಯಂತೆ ಮೂರು ದಿನಗಳವರೆಗೆ ಉಪಚರಿಸುತ್ತಾರೆ. ಇದರಿಂದ ಪ್ರಾಣಿಗಳು ಗುಣಮುಖವಾಗುತ್ತವೆ ಹಾಗೂ ಹುಣ್ಣು ಮತ್ತು ಗಾಯಗಳು ಬೇಗನೆ ಒಣಗುತ್ತವೆಯಂತೆ. ಈ ರೀತಿ ಸಾಹುರವರು ಕರ್ಪೂರವನ್ನು ಉಪಯೋಗಿಸಿಕೊಂಡು 20 ಕ್ಕೂ ಹೆಚ್ಚು ಹಸುಗಳನ್ನು ಗುಣಪಡಿಸಿದ್ದಾರೆ.

ಮೂಲ : ಹನಿ ಬೀ Vol 18 (2) ಎಪ್ರೀಲ್ – ಜೂನ್ 2007, ಪುಟ ಸಂಖ್ಯೆ 19.

'ಸೃಷ್ಟಿ' ಸನ್ಮಾನಿತರು

ಪ್ರತಿ ವರ್ಷದಂತೆ ಈ ಬಾರಿಯ 'ಸೃಷ್ಟಿ' ಸನ್ಮಾನ ಸಮಾರಂಭ ಫೆಬ್ರವರಿ 28 ಮತ್ತು 29 ರಂದು ಅಹಮದಾಬಾದಿನಲ್ಲಿ ಜರುಗಿರುತ್ತದೆ. ಕರ್ನಾಟಕದಿಂದ ಶ್ರೀಯುತರಾದ ಚೆನ್ನಬಸಪ್ಪ ಶಿವಪ್ಪ ಕೊಂಬಳಿ, ಎ.ಪಿ.ಚಂದ್ರಶೇಖರ್ ಮತ್ತು ಎನ್.ಟಿ ಸುರೇಶ್ ಈ ಮೂವರನ್ನು ಆಹ್ವಾನಿಸಿ ಸನ್ಮಾನಿಸಲಾಗಿರುತ್ತದೆ.

ಹಾವೇರಿ ಜಿಲ್ಲೆಯ ಕಾಕೋಳು ಗ್ರಾಮದ ಚೆನ್ನಬಸಪ್ಪ ಕೊಂಬಳಿಯವರು ಕಳೆದ ಆರು ವರ್ಷಗಳಲ್ಲಿ ಜಿಲ್ಲೆಯಾದ್ಯಂತ ಸಾವಿರಾರು ರೈತರನ್ನು ಹುರಿದುಂಬಿಸಿ ಅಂತರ್ಜಲವನ್ನು ಹೆಚ್ಚಿಸಿ ನೂರಾರು ಬತ್ತಿದ ಬಾವಿಗಳನ್ನು ಮರುಪೂರಣ ಮಾಡಿದ್ದಾರೆ. ಮೈಸೂರಿನ ಸಮೀಪ ಕಳಲವಾಡಿ ಗ್ರಾಮದ ಎ.ಪಿ. ಚಂದ್ರಶೇಖರವರು ತಮ್ಮ ಇಂದ್ರಪ್ರಸ್ಥ ಫಾರಂನ್ನು ಅದ್ಭುತ ಜೀವ ವೈವಿಧ್ಯ ಸಾವಯವ ಕೃಷಿ ಫಾರಂ ಆಗಿ ಪರಿವರ್ತಿಸಿರುತ್ತಾರೆ. ಹಾಗೆ, ಮಲೆನಾಡ ತಪ್ಪಲಿನ ಕಮ್ಮರಡಿ ಗ್ರಾಮದ ವಿಶ್ವತೀರ್ಥ ಬಾಲಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿರುವ ಶ್ರೀ ಎನ್.ಟಿ. ಸುರೇಶ್, ಶೋಧಯಾತ್ರೆಯೂ ಸೇರಿದ ಹಾಗೆ ಜೀವ ವೈವಿಧ್ಯ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಹನಿಬೀ ಜಾಲಕ್ಕೆ ಸೇವೆ ಸಲ್ಲಿಸಿರುತ್ತಾರೆ. ಇವರೆಲ್ಲರಿಗೂ ಹಿತ್ತಲ ಗಿಡದ ಅಭಿನಂದನೆಗಳು.

'ಮಲೆನಾಡ ಗಿಡ್ಡ' ವಿಶಿಷ್ಟ ಗೋ ತಳಿ

ಭಾರತೀಯ ಜೀವನದ ಎಲ್ಲ ಸ್ತರಗಳಲ್ಲಿ ಒಂದಲ್ಲ ಒಂದು ರೀತಿಯ ಗೋವುಗಳ ಕೊಡುಗೆ ಇದ್ದೇ ಇದೆ. ಶತಮಾನದ ಹಿಂದೆ 90 ರಿಂದ 100 ರಷ್ಟಿದ್ದ ಗೋ ತಳಿಗಳು ವಿದೇಶಿ ತಳಿಗಳ ವ್ಯಾಮೋಹದಿಂದಾಗಿ ವಿನಾಶದೆಡೆಗೆ ಸಾಗುತ್ತಿವೆ. ಇವುಗಳಲ್ಲಿ ಮಲೆನಾಡ ಗಿಡ್ಡ ತಳಿಯು ಗೋವಂಶದಲ್ಲೇ ಅತ್ಯಂತ ವಿಶಿಷ್ಟವಾದದ್ದು. ಇದು ಕರ್ನಾಟಕದ ಮಲೆನಾಡು ಪ್ರದೇಶ ಹಾಗೂ ಕರಾವಳಿ ತೀರ ಪ್ರದೇಶಗಳು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕ ಮಗಳೂರು, ಕೊಡಗು ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ದೊಡ್ಡ ಸಂಖ್ಯೆಯಲ್ಲಿ ಕಾಣಸಿಗುತ್ತಿದೆ. ಈಗ ಅವುಗಳ ಸಂಖ್ಯೆ ಅತ್ಯಂತ ವೇಗವಾಗಿ ಕ್ಷೀಣಿಸುತ್ತಿದೆ. ಅಥವಾ ಇವು ವಿದೇಶೀ ತಳಿಗಳೊಂದಿಗೆ ಸಂಕಿರಣಗೊಂಡು ಸಂಪೂರ್ಣ ಮಿಶ್ರ ತಳಿಗಳಾಗಿವೆ.

ಮಲೆನಾಡು ಗಿಡ್ಡ ತಳಿಯು ಸಾಧಾರಣವಾಗಿ ಕಪ್ಪು, ಕೆಂಪು, ಬೂದು, ಬಿಳಿ ಬಣ್ಣದವುಗಳಾಗಿದ್ದು, ಇದರಲ್ಲಿ ಕಪಿಲೆ ವರ್ಣದ ಹಸುಗಳು, ವೇದಗಳ ಉಲ್ಲೇಖದಂತೆ ಅತ್ಯಂತ ಶ್ರೇಷ್ಠ ವಾದವು. ಕಪಿಲೆ ಅಥವಾ ಕೌಲು ಬಣ್ಣದ ಮೈ ಹೊಂದಿದ್ದು, ಹಣೆಯಲ್ಲಿ, ಗೊರಸುಗಳ ಮೇಲ್ಭಾಗ ಹಾಗೂ ಬಾಲದ ತುದಿಯಲ್ಲಿ ಬಿಳಿ ಬಣ್ಣವಿದ್ದು ಬೆಕ್ಕಿನ ಕಣ್ಣು ಹೊಂದಿರುವ ಹಸುಗಳಿಗೆ ಕಪಿಲೆ ಎನ್ನುತ್ತಾರೆ. ಇವುಗಳ ಹಾಲು, ಗಂಜಲ, ಸಗಣಿ ಎಲ್ಲವೂ ಗರಿಷ್ಠ ಗುಣಮಟ್ಟದ್ದಾಗಿದ್ದು, ಈ ಕಪಿಲೆಯ ಗೋ ಮೂತ್ರದ ನಶ್ಯವು ಅಪಸ್ಮಾರವನ್ನು ಗುಣಪಡಿಸುತ್ತದೆ. ಹಾಲು ಔಷಧೀಯ ಗುಣ ಹೊಂದಿದ್ದು ಹೆಚ್ಚಿನ ಕೊಬ್ಬಿನಂಶ ಮತ್ತು ಕಡಿಮೆ ಕೊಲೆಸ್ಟ್ರಾಲ್ ಅಂಶ ಹೊಂದಿದೆ. ಈ ಗೋವುಗಳು ಅತ್ಯಂತ ಸೌಮ್ಯ ಸ್ವಭಾವದವುಗಳಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಸಂಪ್ರದಾಯಸ್ಥರು ಈ ಗೋವುಗಳನ್ನು ಅತ್ಯಂತ ಪೂಜನೀಯ ಎಂದು ಪರಿಗಣಿಸುತ್ತಾರೆ. ಈ ಗೋವುಗಳು ಗಾತ್ರದಲ್ಲಿ ಸಣ್ಣದಾಗಿದ್ದು ಅಸಾಧಾರಣ ರೋಗ ನಿರೋಧಕ ಶಕ್ತಿಯನ್ನು ಹೊಂದಿವೆ. ಮಲೆನಾಡಿನ ಮಳೆಗೆ, ಬಿಸಿಲಿಗೆ ಮೈಯೊಡ್ಡಿ ಮೇಯುವ ಈ ಹಸುಗಳು ಹೆಚ್ಚು ಬೆಲೆಯ ಆಧುನಿಕ ಕೃತಕ ಪಶು ಆಹಾರಗಳ ಅಗತ್ಯವಿಲ್ಲದೆಯೇ ದಿನವೊಂದಕ್ಕೆ ಎರಡು ಲೀಟರ್ ಹಾಲು ಕೊಡುತ್ತವೆ. ಅಂದರೆ ಇದು ಶೂನ್ಯ ಬಂಡವಾಳದ ಹೈನುಗಾರಿಕೆಯಾಗಿದ್ದು ಸಣ್ಣ ರೈತರಿಗೆ ಅತ್ಯಂತ ಸೂಕ್ತ ತಳಿಯಾಗಿದೆ. ಕಪಿಲೆ ಹಸುಗಳಿಗೆ ಇತರ ಬಣ್ಣದ ಕರುಗಳು ಹುಟ್ಟಬಹುದು. ಹಾಗೆಯೇ ಇತರ ಬಣ್ಣದ ಹಸುವಿಗೆ ಕಪಿಲೆ ವರ್ಣದ ಕರು ಹುಟ್ಟಬಹುದು. ಪ್ರತಿ ವರ್ಷ ಕರು ಹಾಕುವ ಹಸುಗಳೂ ಇವೆ.

ಇಂದಿನ ದಿನಗಳಲ್ಲಿ ವಿದೇಶಿ ತಳಿಗಳ ವ್ಯಾಮೋಹ, ಕೃತಕ ಗರ್ಭಧಾರಣೆ, ಹೆಚ್ಚು ಹಾಲು ಸಿಗಬೇಕೆಂಬ ಅತಿ ಆಸೆ, ಗವ್ಯ ಉತ್ಪನ್ನಗಳು ಹಾಗು ಹಾಲಿನ ಗುಣಮಟ್ಟದ ಬಗ್ಗೆ ಗಮನ ಕೊಡದೆ ಹಾಲಿನ ಪ್ರಮಾಣಕ್ಕೆ ಮಾತ್ರ ಪ್ರಾಮುಖ್ಯತೆ ಕೊಡುತ್ತಿರುವುದು, ಮಲೆನಾಡು ಗಿಡ್ಡದಂತಹ ತಳಿಯ ಅವನತಿಗೆ ಕಾರಣಗಳಾಗಿವೆ. ಶಿವಮೊಗ್ಗದ ಹೊಸನಗರದ ಶ್ರೀ ರಾಮಚಂದ್ರಾಪುರ ಮಠವು ಕಾಮದುಘಾ ಯೋಜನೆಯ ಅಡಿಯಲ್ಲಿ ಭಾರತೀಯ ಗೋವಂಶದ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ, ಜನಜಾಗೃತಿ, ಶಿಕ್ಷಣ ಹಾಗೂ ಧನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡಿದೆ. ಈ ಕಾಮದುಘಾ ಯೋಜನೆಯಡಿಯಲ್ಲಿ ಮಲೆನಾಡ ಗಿಡ್ಡ ತಳಿಯ ಸಂರಕ್ಷಣೆಗಾಗಿ, ಮಲೆನಾಡಿನ ಪ್ರತೀ ಮನೆಯಲ್ಲಿ ಕನಿಷ್ಟ ಒಂದು ಮಲೆನಾಡ ಗಿಡ್ಡ ತಳಿ ಸಾಕುವಂತೆ ಪ್ರಚೋದಿಸಲಾಗುವುದು, ಪ್ರತಿ ಹಳ್ಳಿಯಲ್ಲಿ ಕನಿಷ್ಟ ಒಂದು ಉತ್ತಮ ಹೋರಿಯನ್ನು ಸಾಕುವುದು, ಗೋಶಾಲೆಗಳು, ಸಂಶೋಧನಾ ಕೇಂದ್ರಗಳು, ಹೋರಿ ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿಸುವುದು, ಉತ್ತಮ ಹೋರಿಗಳು, ಹಸುಗಳನ್ನು ರೈತರು ಗುರುತಿಸಿ, ಅವುಗಳು ಶುದ್ಧ ತಳಿಯಾಗಿ ವಂಶಾಭಿವೃದ್ಧಿಯಾಗುವುದರ ಬಗ್ಗೆ ತಿಳುವಳಿಕೆ ನೀಡುವುದು, ಗೋ ಮೂತ್ರ, ಗೋಮಯಗಳ ಕೃಷಿ ಉಪಯೋಗ, ಪಂಚಗವ್ಯದ ಔಷಧೀಯ ಗುಣಗಳ ಬಗ್ಗೆ ಸಂಶೋಧನೆ ಹಾಗೂ ಪ್ರಚಾರ, ಗುಡ್ಡದಲ್ಲಿ ಅಡ್ಡಾಡಿ ಔಷಧೀಯ ಸಸ್ಯಗಳನ್ನು ತಿಂದು ಅತ್ಯಂತ ಸತ್ವಯುತ ಹಾಲು ನೀಡುವ ಈ ತಳಿಯ ಹಾಲಿಗೆ ವಿದೇಶಿ ಹಸುಗಳ ಹಾಲಿಗಿಂತ ಹೆಚ್ಚಿನ ಬೆಲೆ ಸಿಗುವಂತೆ ಮಾಡುವುದು ಇನ್ನು ಮುಂತಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಯೋಜನೆಯ ಅಡಿಯಲ್ಲಿ ಈಗಾಗಲೇ ಮಲೆನಾಡು ಮತ್ತು ಕರಾವಳಿಯಲ್ಲಿ ಮಲೆನಾಡ ಗಿಡ್ಡ ತಳಿ ಸಂರಕ್ಷಣಾ ಗೋಶಾಲೆಗಳನ್ನು ಸ್ಥಾಪಿಸಲಾಗಿದೆ. ವಿಟ್ಲ, ಮುಡಿಪು, ಹೊಸನಗರಗಳಲ್ಲಿ, ಹಾಗೇ ಸಾಗರ, ವೇಣೂರು, ಸುಳ್ಯದಲ್ಲಿ ಗೋಶಾಲೆ ಸ್ಥಾಪನೆಯ ಕೆಲಸ ಸಾಗುತ್ತಿದೆ.

ಈ ಗೋವುಗಳ ಮೂತ್ರ ಸೌಮ್ಯ ಗುಣ ಹೊಂದಿದ್ದರೆ, ಉತ್ತರ ಭಾರತದ ಗೋಮೂತ್ರ ತೀಕ್ಷ್ಣಗುಣ ಹೊಂದಿದೆ. ಹಾಗೂ ಮಲೆನಾಡ ಗಿಡ್ಡ ತಳಿಯ ಗೋಮೂತ್ರದ ಔಷಧೀಯ ಗುಣಗಳ ಬಗ್ಗೆ ವಿವಿಧ ಸ್ತರಗಳಲ್ಲಿ ಸಂಶೋಧನೆ ನಡೆಸಲಾಗುತ್ತಿದೆ. ಗೋಶಾಲೆಗಳಲ್ಲಿ ವಿವಿಧ ಗವ್ಯಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ. ಗವ್ಯ ಚಿಕಿತ್ಸಾ ಕೇಂದ್ರ ಗಳನ್ನು ನಡೆಸಲಾಗುತ್ತಿದೆ. ಈಗಾಗಲೇ ಹಲವು ಮಾರಕ ರೋಗಗಳಿರುವ ಅನೇಕ ರೋಗಿಗಳನ್ನು ಗುಣಪಡಿಸಲಾಗಿದೆ. ಒಟ್ಟಿನಲ್ಲಿ ಈ ತಳಿಯ ಸಂರಕ್ಷಣೆ ಹಾಗೂ ಸಂವರ್ಧನೆಯ ಕಾರ್ಯಗಳೇ ಈ ಯೋಜನೆಯ ಗುರಿಯಾಗಿದೆ.

ಶ್ರಮಜೀವಿ ದೇಸಿ ತಳಿ 'ಹಳ್ಳಿಕಾರ್'

ಹಳ್ಳಿಕಾರ್ ಬಲಿಷ್ಠವಾದ ಹೋರಿ ತಳಿ. ಕರ್ನಾಟಕದ ಅನೇಕ ರಾಸು ತಳಿಗಳಾದ ಅಮೃತ್ ಮಹಲ್, ಮಲೆನಾಡ ಗಿಡ್ಡ ಇತ್ಯಾದಿಗಳೊಂದಿಗೆ ಹಳ್ಳಿಕಾರ್ ಕೂಡಾ ಒಂದು. ಇದರ ಮೂಲ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಹಾಗೂ ಚಿತ್ರದುರ್ಗ ಜಿಲ್ಲೆಗಳಾಗಿವೆ. ದಕ್ಷಿಣ ಭಾರತದ ಹೆಚ್ಚಿನ ಗೋತಳಿಗಳು ಹಳ್ಳಿಕಾರಿನ ಮೂಲ ಹೊಂದಿವೆ. ಗಂಡು ಕರುಗಳು ಪೂರ್ಣ ಹಾಲು ಕುಡಿದು ಬೆಳೆಯುತ್ತವೆ. ಈ ತಳಿಯು ಬೂದು ಬಣ್ಣ ಹೊಂದಿದ್ದು, ಮುಖ, ಗಂಗೆ ತೊಗಲು, ಹಿಂಬಾಗದಲ್ಲಿ ಮತ್ತು ಕೆಳಭಾಗದಲ್ಲಿ ಬಿಳಿ ಬಣ್ಣ ಕಾಣಬಹುದು. ಉದ್ದ ಹಾಗು ಉಬ್ಬಿರುವ ಮುಖವಿದ್ದು ಮಧ್ಯದಲ್ಲಿ ಕಣಿವೆ ಇರುತ್ತದೆ. ಉದ್ದನೆಯ ಕೊಂಬು, ಬುಡದಲ್ಲಿ ಹತ್ತಿರ, ತುದಿ ಕಪ್ಪು ಹಾಗೂ ಚೂಪಾಗಿರುತ್ತದೆ. ಕಿವಿಗಳು ಸಣ್ಣವಿದ್ದು ತುದಿ ಚೂಪಾಗಿರುತ್ತದೆ. ಮೂತಿ ಮತ್ತು ಬಾಲದ ತುದಿಕಪ್ಪು ಬಣ್ಣವನ್ನು ಹೊಂದಿರುತ್ತದೆ. ಸುಮಾರು 600 ವರ್ಷಗಳ ಇತಿಹಾಸವುಳ್ಳ ಈ ಹಳ್ಳಿಕಾರ್ ತಳಿಯ ಹಿನ್ನೆಲೆ ಪುರಾಣಗಳ ಬಗ್ಗೆ ಸಾಕಷ್ಟು ವ್ಯಾಖ್ಯಾನಗಳಿವೆ. ಮೈಸೂರಿನ ಹುಲಿ, ಟಿಪ್ಪುಸುಲ್ತಾನ್ ಹೋರಿ ಮತ್ತು ಹಸುಗಳನ್ನು ಹೈನುಗಾರಿಕೆಗಾಗಿ ಬಳಸುತ್ತಿದ್ದನಂತೆ. ಟಿಪ್ಪು ಮತ್ತು ಹೈದರಾಲಿ, ಅಮೃತ್ ಮಹಲ್ ಎಂಬ ಹಾಲು ಉತ್ಪಾದನಾ ಇಲಾಖೆಯನ್ನು ಪ್ರಾರಂಭಿಸಿದ್ದರು. ತಿರುಚಿನಾಪಳ್ಳಿಯಿಂದ ತಂದ ಹೋರಿಗಳು ಹಾಗೂ ರಾಜ್ಯದ ತಳಿ ಅಮೃತ್ ಮಹಲ್ ಹಸುಗಳ, ಮಿಶ್ರ ತಳಿ ಹಳ್ಳಿಕಾರ್ ಎಂದು ನಾಮಕರಣ ಮಾಡಲಾಯಿತು. ಈ ತಳಿಯ ಹೋರಿಗಳು ಅದ್ಭುತವಾದ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆಯಲ್ಲದೇ, ಕಠಿಣ ಶ್ರಮದ ಕೆಲಸಕ್ಕೆ ಮತ್ತು ಭಾರ ಹೊರುವುದರೊಂದಿಗೆ ವೇಗದ ನಡಿಗೆಗೂ ಹೆಸರಾಗಿವೆ. ಹವಾಮಾನಕ್ಕೆ ತಕ್ಕಂತೆ ಹೊಂದಿಕೊಂಡು ಬೆಟ್ಟದ ಹುಲ್ಲು, ಗರಿಕೆ, ಕಡ್ಡಿ ಕಸ ತಿಂದು ಸುಲಭವಾಗಿ ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಹೊಂದಿವೆ. ಅದರ ನೀಳಾಕಾರದ ದೇಹ, ಕಠಿಣವಾದ ಗೊರಸು, ಕುಂಟೆ ಹೊಡೆಯಲು, ಗಾಡಿ, ಕಪಿಲೆ, ಬಾನಿ, ನೇಗಿಲು ಉಳುಮೆಗೆ ಸಹಕಾರಿಯಾಗಿದೆ. ಹಳ್ಳಿಕಾರ್ ಹಸುಗಳು, ಕರುಗಳ, ಪಾಲನೆಯಲ್ಲಿ ಉಳಿದ ಹಸುಗಳಿಗಿಂತ ಭಿನ್ನ. ಇವುಗಳನ್ನು ಹಳ್ಳಿಗಳಲ್ಲಿ 'ರೂಪಾಯಿ ಬಣ್ಣದ ಹೋರಿಗಳು' ಎಂದು ಕರೆಯುವುದು ವಾಡಿಕೆ. ಈ ಬಹುಪಯೋಗಿ ತಳಿಯನ್ನು ಸಾಕುವುದ ರಿಂದ ಹಾಲು ಉತ್ಪಾದನೆಯ ಜೊತೆಗೆ ವಂಶಾಭಿವೃದ್ಧಿಯಲ್ಲಿಯೂ ಆಶಾದಾಯಕ.

ಮೂಲ : ಪ್ರಜಾವಾಣಿ, 15 ಫೆಬ್ರವರಿ, 2007.

ಸಾವಯವ ಕೃಷಿ

'ಕಮ್ಯೂನಿಸ್ಟ್' ಕಳೆಯಿಂದ ಗೊಬ್ಬರ

ಹೆಚ್ಚಾಗಿ ಮಳೆ ಬೀಳುವ ಮಲೆನಾಡಿನ ಪ್ರದೇಶಗಳಲ್ಲಿ 'ಯುಪಟೋರಿಯಂ' ಸಸ್ಯ ರಸ್ತೆ ಬದಿಯಲ್ಲಿ, ಗದ್ದೆಗಳ ಬದುಗಳಲ್ಲಿ ಮತ್ತು ಬಂಜರು ಭೂಮಿಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಈ ಸಸ್ಯವನ್ನು ಆ ಭಾಗದ ಜನರು 'ಕಮ್ಯೂನಿಸ್ಟ್ ಕಳೆ'ಎಂದು ಕರೆಯುತ್ತಾರೆ. ಇಂತಹ ಕಳೆಯನ್ನು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಆಲ್ದೂರು ಗ್ರಾಮದ ರೈತರಾದ ಜನಾರ್ಧನ ಗೌಡರು ಹಸಿರು ಗೊಬ್ಬರವಾಗಿ ಹಾಗೂ ಇದರಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಭತ್ತದ ಗದ್ದೆಗಳಲ್ಲಿ ಬಳಸಿ, ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಇವರ ಅನುಭವದಂತೆ ಎಕರೆಗೆ 3.5 ಟನ್‌ಗಳಷ್ಟು 'ಯುಪಟೋರಿಯಂ' ಅನ್ನು ಹಸಿರು ಗೊಬ್ಬರವಾಗಿ ಬಳಸುವುದರಿಂದ ರಾಸಾಯನಿಕ ಗೊಬ್ಬರವನ್ನು ಶೇ.40 ರಿಂದ 50 ರಷ್ಟು, ಹಾಗೂ ಇದೇ ಯುಪಟೋರಿಯಂನ್ನು ಕಾಂಪೋಸ್ಟ್ ಗೊಬ್ಬರವಾಗಿ ಪರಿವರ್ತಿಸಿ ಎಕರೆಗೆ 2.5 ಟನ್ ಹಾಕುವುದರಿಂದ ಶೇ. 75 ರಿಂದ 80 ರಷ್ಟು ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಬಹುದು.

ಹಸಿರು ಗೊಬ್ಬರ :- ಸಾಮಾನ್ಯವಾಗಿ 2.5 ರಿಂದ 3 ಮೀಟರ್ ಎತ್ತರಕ್ಕೆ ಬೆಳೆಯುವ ಯುಪಟೋರಿಯಂ ಗಿಡಗಳ ಕಾಂಡ ಹಾಗು ಎಲೆಗಳು ಬಹಳ ಮೃದುವಾಗಿರುವುದರಿಂದ ನಾಟಿಗೆ ಮುನ್ನ ಗದ್ದೆಯಲ್ಲಿ ತುಳಿದರೆ ಬಹುಬೇಗ ಮಣ್ಣಿನಲ್ಲಿ ಕೊಳೆತು ಬೆಳೆಗಳಿಗೆ ಪೋಷಕಾಂಶಗಳನ್ನು ಒದಗಿಸುತ್ತವೆ.

ಕಾಂಪೋಸ್ಟ್ ಗೊಬ್ಬರ :- ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಲು ಯುಪಟೋರಿಯಂ ಗಿಡಗಳನ್ನು ಹೂ ಬಿಡುವುದಕ್ಕೆ ಮುಂಚೆ ಚಿಕ್ಕದಾಗಿ ಕತ್ತರಿಸಿ ಕಲ್ಲಿನ ತೊಟ್ಟಿಗಳಲ್ಲಿ ಪದರ ಪದರವಾಗಿ ತುಂಬಿ ಸಗಣಿ, ನೀರು ಹಾಕಬೇಕು. ಮೇಲ್ಪದರವನ್ನು ಮಣ್ಣಿನಿಂದ ಮುಚ್ಚಬೇಕು. ಶೇ. 50 ರಿಂದ 60 ರಷ್ಟು ತೇವಾಂಶವಿರುವಂತೆ ವಾರಕ್ಕೊಮ್ಮೆ ನೀರನ್ನು ಚಿಮುಕಿಸುತ್ತಿರಬೇಕು. ನಂತರ 25 ದಿನಗಳ ಅಂತರದಲ್ಲಿ ಎರಡು ಬಾರಿ ಗೊಬ್ಬರವನ್ನು ಮುಗುಚಿ ಹಾಕುವುದರಿಂದ 60 ರಿಂದ 70 ದಿನಗಳಲ್ಲಿ ಕಂದು ಬಣ್ಣದ ಹುಡಿಯಾಗಿ ಉತ್ತಮ ಪೋಷಕಾಂಶಯುಕ್ತ ಕಾಂಪೋಸ್ಟ್ ಗೊಬ್ಬರ ತಯಾರಾಗುತ್ತದೆ. ಇದನ್ನು ತೋಟಗಾರಿಕೆ ಬೆಳೆಗಳಿಗೂ ಬಳಸಬಹುದು ಯುಪಟೋರಿಯಂ ಎಲೆಗಳಲ್ಲಿ ಸಾರಜನಕ, ರಂಜಕ, ಪೊಟ್ಯಾಷ್ ಹಾಗು ಇತರೆ ಪೋಷಕಾಂಶಗಳಿದ್ದು ಸಂಪೂರ್ಣವಾಗಿ ನೈಸರ್ಗಿಕವಾದುದರಿಂದ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿ ಆಗುವುದಿಲ್ಲವಂತೆ. ಈ ರೀತಿ ಯುಪಟೋರಿಯಂನಿಂದ ಹಸಿರು ಹಾಗು ಕಾಂಪೋಸ್ಟ್ ಗೊಬ್ಬರವನ್ನು ಸಾಮಾನ್ಯವಾಗಿ ಅಲ್ಲಿನ ಎಲ್ಲಾ ರೈತರು ಬಳಸುತ್ತಿದ್ದಾರೆ ಎಂದು ಜನಾರ್ಧನ ಗೌಡರು ಹೇಳಿದ್ದಾರೆ

ಹೆಚ್ಚಿನ ಮಾಹಿತಿಗಾಗಿ ಡಾ.ಆರ್. ಕೃಷ್ಣಮೂರ್ತಿ ಅವರನ್ನು ಮೊ. ಫೋನ್ 9900173228 ಗೆ ಸಂಪರ್ಕಿಸಬಹುದು.

ಹುರುಳಿ ಹಿಟ್ಟಿನ ಜೀವಾಮೃತ

ಪುತ್ತೂರು ತಾಲ್ಲೂಕಿನ ಪುರುಷ ಬೆಟ್ಟು ಗ್ರಾಮದ ರೈತ ಪದ್ಮಾಲಯ ಟಿ.ಜಿ. ಮಹಾಬಲೇಶ್ವರ ಭಟ್ಟರು ಹುರುಳಿಯ ಹಿಟ್ಟನ್ನು ಬಳಸಿಕೊಂಡು ಜೀವಾಮೃತ ತಯಾರಿಸುತ್ತಾರೆ. ಇವರು ತಮ್ಮ ಆರು ಎಕರೆಯ ಅಡಿಕೆ ತೋಟದಲ್ಲಿ ದೇಸಿಬಾಳೆ, ಜಾಯಿಕಾಯಿ. ತೊಂಡೆ, ಕಾಳು ಮೆಣಸು, ಪಪ್ಪಾಯಿ ಇತ್ಯಾದಿಗಳನ್ನು ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಸುತ್ತಿದ್ದು ಈ ಹುರುಳಿ ಹಿಟ್ಟಿನ ಜೀವಾಮೃತ ಬಳಸಿ ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ. ಇವರು ಹುರುಳಿ ಹಿಟ್ಟಿನ ಜೀವಾಮೃತವನ್ನು ತಯಾರಿಸುವ ವಿಧಾನ ಹೀಗಿದೆ. 200 ಲೀಟರ್ ನೀರಿನಲ್ಲಿ 10 ಕೆ.ಜಿ. ಸಗಣಿ, 10 ಲೀಟರ್ ಗೋಮೂತ್ರ, 2 ಕೆ.ಜಿ. ಹುರುಳಿ ಹಿಟ್ಟಿನ ಪುಡಿ (ಅಥವಾಯಾವುದಾದರೂ ದ್ವಿದಳ ಧಾನ್ಯದ ಪುಡಿ) 2ಕೆ.ಜಿ. ಕಪ್ಪು ಬೆಲ್ಲ, ಅರ್ಧ ಸೇರು ಭೂಮಿಯ ಇವನ್ನೆಲ್ಲಾ ಚೆನ್ನಾಗಿ ಕಲಸಿಡುತ್ತಾರೆ. ಇದೇ ಮಿಶ್ರಣ 48 ಗಂಟೆಗಳ ನಂತರ ಜೀವಾಮೃತವಾಗಿ ಬಳಕೆಗೆ ಸಿದ್ಧ.

ಒಂದು ಅಡಿಕೆ ಮರದ ಬುಡಕ್ಕೆ ಹುರುಳಿ ಹಿಟ್ಟಿನ ಜೀವಾಮೃತವನ್ನು ಒಂದು ಅಥವಾ ಒಂದು ಕಾಲು ಲೀಟರ್ ಕೊಡುವುದರ ಜೊತೆಗೆ ಒಂದೊಂದು ಬುಟ್ಟಿ ಹಸಿರೆಲೆ ಗೊಬ್ಬರ, ಗೊನೆ ಕಡಿದ ಬಳಿಕ ಉಳಿದ ಬಾಳೆಯ ದಿಂಡಿನ ಕತ್ತರಿಸಿದ ಚೂರು, ತೋಟದ ಕಳೆಹುಲ್ಲು ಅದರ ಮೇಲೆ ಗೋಬರ್ ಅನಿಲ ಸ್ಥಾವರದ ಬಗ್ಗಡ ಸುರಿದು ಕಸ ಕಡ್ಡಿಗಳನ್ನು ಸೇರಿಸಿ ಸುಡುಮಣ್ಣು ಹಾಕುತ್ತಾರೆ. ಇನ್ನೂರು ಲೀಟರ್ ಜೀವಾಮೃತವು 140 ಮರಗಳಿಗೆ ಸಾಕಾಗುತ್ತದೆ. ಇದಕ್ಕೆ ತಗಲುವ ಖರ್ಚು 50 ರೂಪಾಯಿ ಮಾತ್ರ. ಅಡಿಕೆ ಸಿಂಗಾರದ ನಳ್ಳಿ ಉದುರುವ ಸಮಸ್ಯೆಗೂ ಕೂಡ ಜೀವಾಮೃತದ ಬಳಕೆಯಿಂದ ಪರಿಹಾರ ಸಿಕ್ಕಿದೆ ಮಾತ್ರವಲ್ಲದೇ, ತೋಟಕ್ಕೆ ಹಂದಿಗಳ ಹಾವಳಿಯು ಕೂಡ ತುಂಬಾ ಕಡಿಮೆಯಾಗಿದೆ ಎನ್ನುತ್ತಾರೆ ಮಹಾಬಲೇಶ್ವರ ಭಟ್ಟರು. ಮೂರು ವರ್ಷಗಳಿಂದ ಹುರುಳಿ ಹಿಟ್ಟಿನ ಜೀವಾಮೃತವನ್ನು ಬಳಸುತ್ತಿರುವ ಮಹಾಬಲೇಶ್ವರ ಭಟ್ಟರ ಹೇಳಿಕೆಯಂತೆ ಇದರಿಂದ ಅವರ ಫಸಲು ಗಣನೀಯವಾಗಿ ಹೆಚ್ಚಿದೆ.

ಹೆಚ್ಚಿನ ಮಾಹಿತಿಗಾಗಿ ಟಿ.ಜಿ. ಮಹಾಬಲೇಶ್ವರ ಭಟ್ಟರವರನ್ನು ಫೋನ್ ನಂ: 08251-263215 ಮೂಲಕ ಸಂಪರ್ಕಿಸಬಹುದು.

ಕೂಡುಭಟ್ಟ

ಸಾವಯವ ತಾರಸಿ ತೋಟ

ಲೇಖಕರು - ಅನುಸೂಯ.ಎಸ್.ಶರ್ಮ. ಬೆಲೆ - 30 ರೂ. ಪ್ರಕಾಶನ - ಕೃಷಿ ಮಾಧ್ಯಮ ಕೇಂದ್ರ, 119.1ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ -580008, ದೂರವಾಣಿ : 9900517749

ಅನೇಕ ದೃಷ್ಟಿಯಿಂದ ಸಾವಯಾವ ತಾರಸಿ ತೋಟ ಇಂದು ಮಹತ್ವದ್ದೆನಿಸಿದೆ. ಮುಖ್ಯವಾಗಿ ಮನೆಯ ಜೈವಿಕ ತ್ಯಾಜ್ಯದ ಸದ್ಬಳಕೆ ಹಾಗೂ ಆರೋಗ್ಯಪೂರ್ಣ ತರಕಾರಿ ಬೆಳೆದುಕೊಳ್ಳುವುದಕ್ಕೆ ತಾರಸಿ ತೋಟ ಹೆಚ್ಚು ಸಹಕಾರಿ. ಮನೆಯ ಸೌಂದರ್ಯ ಹಾಗೂ ಮನೋಲ್ಲಾಸಕ್ಕೂ ಪೂರಕ. ಮನಸ್ಸಿದ್ದರೆ ಆರ್ಥಿಕ ಸಂಪಾದನೆ ಕೂಡ ಸಾಧ್ಯ. ಬೆಂಗಳೂರಿನಂಥ ಮಹಾನಗರಗಳಿಂದ ಹಿಡಿದು ಹಾಸನ, ಧಾರವಾಡದಂತಹ ಸಣ್ಣ ಸಣ್ಣ ನಗರಗಳಲ್ಲೂ ಇತ್ತೀಚಿನ ವರ್ಷಗಳಲ್ಲಿ ತಾರಸಿ ತೋಟ ಜನಪ್ರಿಯವಾಗುತ್ತಿದೆ. ಈ ನಿಟ್ಟಿನಲ್ಲಿ ಅನುಸೂಯ ಎಸ್.ಶರ್ಮ ರವರ ಅನುಭವ ಆಧಾರಿತ ಪುಸ್ತಕ, ಸಾವಯವ ತಾರಸಿ ತೋಟ ಬಹಳ ಉಪಯುಕ್ತವಾಗಿದೆ. ಈ ಪುಸ್ತಕದಲ್ಲಿ ಅವರು ತಾರಸಿ ತೋಟದ ಪ್ರಯೋಜನಗಳು ಹಾಗೂ ಅದರ ಅವಶ್ಯಕತೆಗಳನ್ನು ಹೇಳಿದ್ದಾರೆ. ತಾರಸಿಯಲ್ಲಿ ಬೆಳೆಯಬಹುದಾದಂತಹ ಅಲಂಕಾರಿಕ ಸಸ್ಯಗಳು, ಸುಗಂಧ ಸಸ್ಯಗಳು, ಔಷಧೀಯ ಸಸ್ಯಗಳು, ಹೂವಿನ ಗಿಡಗಳು ಮತ್ತು ತರಕಾರಿ ಗಿಡಗಳ ಬಗ್ಗೆ ಪರಿಚಯಿಸಿದ್ದಾರೆ. ಮಣ್ಣಿನ ಮರುಬಳಕೆ, ನೀರುಣಿಸುವ ಬಗೆ, ಗಿಡಗಳ ಪೋಷಣೆಗೆ ಅವಶ್ಯಕತೆಗೆ ತಕ್ಕಷ್ಟು ಕಾಂಪೋಸ್ಟ್, ಜೈವಿಕ ಕೀಟನಾಶಕಗಳ ತಯಾರಿಕೆ, ಇವೆಲ್ಲವುಗಳ ಕುರಿತಾದ ವಿವರಣೆ ನೀಡಿದ್ದಾರೆ.

ಶರ್ಮ ದಂಪತಿಗಳು ಅನೇಕ ವರ್ಷಗಳಿಂದ ಶ್ರದ್ಧೆ, ಉತ್ಸಾಹದಿಂದ ಸ್ವತಃ ತಾರಸಿ ತೋಟದ ಕೃಷಿ ಮಾಡುತ್ತಿದ್ದಾರೆ. 2003 ರಲ್ಲಿ ತಾರಸಿ ತೋಟದ ಪರಿಕಲ್ಪನೆಗಾಗಿ ಅಹಮದಾಬಾದಿನ ಸೃಷ್ಟಿ ಸನ್ಮಾನ ಪ್ರಶಸ್ತಿಯೂ ಅವರಿಗೆ ದೊರೆತಿದೆ.ತಾರಸಿ ತೋಟದ ವಿನ್ಯಾಸದಿಂದ ಆರಂಭಿಸಿ ವಿವಿಧ ಬೆಳೆಗಳನ್ನು ಬೆಳೆಸುವ ಶ್ರಮದ ಜೊತೆಗೇ ಸಸ್ಯಕ್ಕೆ ಪೋಷಣೆ ಹಾಗೂ ರಕ್ಷಣೆ ನೀಡುವ ಬಗ್ಗೆಯೂ ಮಾಹಿತಿ ಕೊಡುವ ಈ ಪುಸ್ತಕ ತಾರಸಿ ತೋಟ ಮಾಡಬೇಕೆಂಬ ಆಸಕ್ತರಿಗೆ ಉತ್ತಮ ಆರಂಭಿಕ ಕೈಪಿಡಿ.

ವಿಶೇಷವಾದ ಎತ್ತಿನ ಗಾಡಿ

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಬಾಣಸಂದ್ರ ಗ್ರಾಮದ ಪರಮಶಿವಯ್ಯನವರು ಹಿಂಭಾರ- ಮುಂಭಾರಕ್ಕೆ ತಗ್ಗಿ-ಬಗ್ಗಿ ಮಾಡಿ ಎತ್ತುಗಳ ಮೇಲಿನ ಹೊರೆ ಕಡಿಮೆ ಮಾಡುವ ವಿಶೇಷವಾದ ಎತ್ತಿನ ಗಾಡಿಯನ್ನು ಆವಿಷ್ಕಾರಿಸಿದ್ದಾರೆ. ಟ್ರಾಕ್ಟರ್ ತಂತ್ರಜ್ಞಾನದ ರೀತಿ ಹಲವು ಅನುಕೂಲತೆಗಳಿರುವ ಈ ಗಾಡಿಗೆ ಅವರು ವೆಚ್ಚ ಮಾಡಿದ್ದು 10,000 ರೂಪಾಯಿ ಮಾತ್ರ. ಇದೇ ಗಾಡಿಯಲ್ಲಿ ತುಂಬಿರುವ ಮಣ್ಣಾಗಲಿ, ಗೊಬ್ಬರವನ್ನಾಗಲಿ ಎತ್ತುಗಳನ್ನು ನೊಗದಿಂದ ತಪ್ಪಿಸದೇ ಸುಲಭವಾಗಿ ಕೆಳಗೆ ಸುರಿಯಬಹುದಾದಂತಹ ಚಿಲಕವನ್ನು ಕೂಡ ಅಳವಡಿಸಲಾಗಿದೆ.

ಸರಕು ತುಂಬಿದ ನಂತರ ಹಿಂಭಾರ-ಅಥವಾ ಮುಂಭಾರ ಆದಲ್ಲಿ, ಗಾಡಿಯಲ್ಲಿ ರೈತ ಕೂರುವ ಜಾಗದಲ್ಲಿ ಅಳವಡಿಸಿರುವ ವೈಸ್‌ರಾಡಿನ ಸಹಾಯದಿಂದ ಗಾಡಿಯ ಅಚ್ಚನ್ನು ಸಮಭಾಗಕ್ಕೆ ತಂದುಕೊಳ್ಳಬಹುದು. ಇದರಿಂದ ಎತ್ತಿನ ಕುತ್ತಿಗೆಗೆ ಹೆಚ್ಚು ಭಾರ ಬೀಳದೇ, ಅದರ ಶಕ್ತಿ ಹೆಚ್ಚು ವ್ಯಯವಾಗದಂತಾಗುತ್ತದೆ. ಇಂತಹ ಗಾಡಿಗೆ ಪರಿಕಲ್ಪನೆ ಕೊಟ್ಟವರು ಲೋಕಮ್ಮನ ಹಳ್ಳಿಯ ಸೋಮಚಾರ್, ಗಾಡಿಯ ಕಬ್ಬಿಣದ ಅಚ್ಚು ತಯಾರಿಸಿದವರು ಮುನಿ, ಅರಹ ಇಂಡಸ್ಟ್ರೀಸ್, ಕೆ.ಬಿ. ಕ್ರಾಸ್, ತುಮಕೂರು. ಇಂತಹ ಗಾಡಿ ಉದ್ದ 8 ಅಡಿ, ಅಗಲ ಮೂರು ಅಡಿ. *ಈ ಗಾಡಿಯ ಬಗ್ಗೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬಹುದಾದ ವಿಳಾಸ :ಪರಮೇಶ್ವರಯ್ಯ, ಬಾಣಸಂದ್ರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ*

ಮೂಲ : ಪ್ರಜಾವಾಣಿ, ಮಾರ್ಚ್ 01, 2007.

ಜೋಳದ ಕಾಳು ಬಿಡಿಸುವ ಸಾಧನ

ಮುಸುಕಿನ ಜೋಳದ ಕಾಳುಗಳನ್ನು ಸುಲಭವಾಗಿ ಬಿಡಿಸುವ ಸಾಧನ ಒಂದನ್ನು ಬಿಜಾಪುರದ ಕೇಂದ್ರಿಯ ವಿದ್ಯಾಲಯದಲ್ಲಿ ಹನ್ನೊಂದನೇ ತರಗತಿಯಲ್ಲಿ ಓದುತ್ತಿರುವ ಯುವ ವಿದ್ಯಾರ್ಥಿ ವಿಟಸ್ ಜೋಸೆಫ್ ತಾಂಡೇಲರವರು ತಯಾರಿಸಿದ್ದಾರೆ. ಒಮ್ಮೆ ಅವರು ಬೇಯಿಸಿದ ಮುಸುಕಿನ ಜೋಳವನ್ನು ತಿನ್ನುತ್ತಿರುವಾಗ, ಪೆನ್ಸಿಲ್ ಕೆತ್ತುವ ಸಾಧನದ ಮಾದರಿಯಲ್ಲೇ ಇದರ ಕಾಳುಗಳನ್ನು ಬಿಡಿಸುವ ಸಾಧನವನ್ನು ಏಕೆ ತಯಾರಿಸಬಾರದೆಂಬ ಯೋಚನೆ ಬಂತು. ಇದೇ ಈ ಯಂತ್ರದ ಅನುಶೋಧನೆಗೆ ಕಾರಣವಾಗಿದೆ. ಈ ಸಾಧನದ ತಯಾರಿಕೆಗೆ ವಿಟಸ್ ಬಳಸಿದಂತ ವಸ್ತುಗಳು 8 ಸೆಂ.ಮೀ. ವ್ಯಾಸದ ಜಿ.ಐ. ಪೈಪಿನ ಒಳ ಭಾಗದಲ್ಲಿ ಹಲ್ಲುಗಳಂತಿರುವ ನಾಲ್ಕು ಕಬ್ಬಿಣದ ತುಂಡುಗಳು, ಅದಕ್ಕೊಂದು ತಿರುಗುವಂತಹ ಹ್ಯಾಂಡಲ್ ರಾಡ್ ಹಾಗೂ ಕೆಳಗಡೆ ಆಸರೆಗೆ ಒಂಟಿ ಕಂಬಿಯಂತಿರುವ ಕಬ್ಬಿಣದ ತುಂಡು. ಇದರ ತಯಾರಿಕೆಗೆ 250 ರಿಂದ 300 ರೂ.ಖರ್ಚಾಗಬಹುದು ಎಂದು ಹೇಳಿದ್ದಾರೆ. ಈ ಸಾಧನದ ಬಾಯೊಳಗೆ ಒಣಗಿದ ಮುಸುಕಿನ ಜೋಳದ ತೆನೆಯನ್ನು ತೂರಿಸಿ, ನಿಧಾನಕ್ಕೆ ಹ್ಯಾಂಡಲ್ ರಾಡ್ ತಿರುಗಿಸಿದರೆ ಕಾಳುಗಳು ಒಡೆಯದೇ ಸುಲಭವಾಗಿ ಕೆಳಗೆ ಬೀಳುವುವು. ಇದನ್ನು ರೈತ ಮಹಿಳೆಯರು, ಮುದುಕರು ಉತ್ಸಾಹದಿಂದ ಬಳಸಿ, ಒಂದು ಗಂಟೆಯ ಅವಧಿಯಲ್ಲಿ ಸುಮಾರು 50 ಕೆ.ಜಿ. ಕಾಳುಗಳನ್ನು ಬಿಡಿಸಬಹುದಂತೆ. ಈ ಸಾಧನಕ್ಕೆ ಕೇಂದ್ರಿಯ ವಿದ್ಯಾಲಯ ಸಂಘಟನೆ ಬೆಂಗಳೂರು ಮಟ್ಟದಲ್ಲಿ ಜರುಗಿದ ಜವಾಹರಲಾಲ್ ನೆಹರು ವಿಜ್ಞಾನ ಪ್ರದರ್ಶನದಲ್ಲಿ ಬಹುಮಾನ ಲಭಿಸಿದೆ. ಹಾಗೂ ಪಶ್ಚಿಮ ಬಂಗಾಳದಲ್ಲಿ ಜರುಗಿದ ರಾಷ್ಟ್ರೀಯ ಮಟ್ಟದ ವಿಜ್ಞಾನ ಪ್ರದರ್ಶನಕ್ಕೆ ಹೋಗಿ ಬಂದ ಖ್ಯಾತಿಯನ್ನು ಪಡೆದಿದೆ.

ಹೆಚ್ಚಿನ ಮಾಹಿತಿಗೆ ತಾಂಡೇಲರನ್ನು ಮೊಬೈಲ್ : 9986294422 ಗೆ ಸಂಪರ್ಕಿಸಬಹುದು.

ಗದ್ದೆ ಕೊಯ್ಲಿಗೆ ಯಂತ್ರದ ಬಳಕೆ

ಶಿರಸಿಯ ರಾಮಚಂದ್ರ ಕೋಡ್ಸಿಂಗೆಯವರು ಸದ್ಯ ಚಾಲ್ತಿಯಲ್ಲಿರುವ ಕಳೆ ತೆಗೆಯುವ ಯಂತ್ರವನ್ನು ಸ್ವಲ್ಪ ಮಾರ್ಪಡಿಸಿ, ಭತ್ತದ ಕೊಯ್ಲನ್ನು ಮಾಡಿದ್ದಾರೆ. ಅವರು ಕಂಡುಕೊಂಡಿರುವ ಈ ಹೊಸ ಉಪಾಯದಿಂದ ಆಳುಗಳನ್ನು ಹುಡುಕಿ ಕರೆತರುವ ತಲೆನೋವಿನ ಕೆಲಸ ದೂರವಾಗಿದೆ. ದಕ್ಷಿಣ ಕನ್ನಡದ ರೈತ ಸ್ನೇಹಿತ ರಾಜೇಶ್ ಗುಂಡಿಗದ್ದೆಯವರ ಸಲಹೆಯ ಮೇರೆಗೆ ಯಂತ್ರಕ್ಕೆ ಕೆಲವು ಮಾರ್ಪಾಡು ಮಾಡಿ ಒಂದು ತಗಡನ್ನು ಸಹ ಜೋಡಿಸಿದ್ದಾರೆ. ಇದರಿಂದ ಭತ್ತದ ಪೈರು ಬೇಕಾಬಿಟ್ಟಿ ಹರಡಿ ಬೀಳುವುದಿಲ್ಲ, ಜೊತೆಗೆ ಕತ್ತರಿಸಿರುವ ಪೈರನ್ನು ಮೆದೆ ಹಾಕಲು ಕೂಡಾ ಅನುಕೂಲವಾಗಿದೆ. ಈ ಯಂತ್ರವನ್ನು ಉಪಯೋಗಿಸಿಕೊಂಡು ಒಂದು ಎಕರೆ ಗದ್ದೆಯನ್ನು 7-8 ತಾಸುಗಳಲ್ಲಿ ಕೊಯ್ದು ಹಾಕಬಹುದಾಗಿದೆ. ಒಂದು ಎಕರೆಯ ಭತ್ತದ ಪೈರು ಕತ್ತರಿಸಲು 650 ಮಿ.ಲೀಟರ್ ಸಾಮರ್ಥ್ಯದ ಯಂತ್ರದ ಟ್ಯಾಂಕಿಗೆ ಎರಡು ಬಾರಿ ಪೆಟ್ರೋಲ್ ತುಂಬಿಸಬೇಕಾಗುತ್ತದೆ . ಈ ಯಂತ್ರದಿಂದ ಗೋದಿ, ರಾಗಿ, ಜೋಳ, ಕಬ್ಬು ಮುಂತಾದ ಬೆಳೆಗಳನ್ನು ಸಹ ಕೊಯ್ಲು ಮಾಡಬಹುದೆಂದು ತಿಳಿಸಿದ್ದಾರೆ. ಜೋಳದಂತಹ ಬೆಳೆಗಳಿಗೆ ಬೇರೆ ತರಹದ ಪ್ಲೇಟ್‌ನ್ನು ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ಅವರು ಎರಡು ತರಹದ ಪ್ಲೇಟ್‌ಗಳನ್ನು ತಯಾರಿಸಿದ್ದಾರೆ. ಇವುಗಳ ಬೆಲೆಯು 225, ಮತ್ತು 275 ರೂ ಗಳು.ಇಂತಹ 50 ರಿಂದ 60 ಪ್ಲೇಟ್‌ಗಳನ್ನು ಈಗಾಗಲೇ ಮಾರಾಟ ಮಾಡಿದ್ದಾರೆ. ಯಂತ್ರದ ಬಗ್ಗೆ 800 ಕ್ಕೂ ಅಧಿಕ ಕರೆಗಳು ಬಂದಿದ್ದು ರಾಮಚಂದ್ರರವರು ಏಳು ಯಂತ್ರಗಳನ್ನು ತಯಾರಿಸಿಕೊಟ್ಟಿದ್ದಾರೆ.

ಹೆಚ್ಚಿನ ಮಾಹಿತಿಗೆ : ಸುಬ್ರಾಯ ಕೋಡ್ಸಿಂಗೆ ಅವರನ್ನು ಫೋನ್: 08384-290221 ಅಥವಾ 9241208518 ಮುಖಾಂತರ ಸಂಪರ್ಕಿಸಬಹುದು.

ಕಡಿಮೆ ವೆಚ್ಚದ ಕಳೆ ಕತ್ತರಿಸುವ ಯಂತ್ರ

ಸಾವಯವ ಕೃಷಿ ಮಾಡುತ್ತಿರುವ ಸಂತೆಬೆನ್ನೂರು ಸಮೀಪದ ಗುಳ್ಳ ಹಳ್ಳಿಯ ಯುವ ರೈತರಾದ ಷಣ್ಮುಖರವರು ಕೇವಲ 2500 ರಿಂದ 3000 ರೂಪಾಯಿ ವೆಚ್ಚದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಕೆಲಸಮಾಡುವ ಕಳೆ ಕತ್ತರಿಸುವ ಯಂತ್ರ ಒಂದನ್ನು ತಯಾರಿಸಿದ್ದಾರೆ. ಇವರು ನಾಲ್ಕು ಎಕರೆ ಅಡಿಕೆ, ತೆಂಗಿನ ತೋಟವನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ತೋಟ ಗಳಲ್ಲಿ ಕಳೆಯನ್ನು ಕೀಳಿಸುವುದೆಂದರೆ ಖರ್ಚಿನ ಕೆಲಸವೇ ಆಗಿರುತ್ತದೆ. ಆದ್ದರಿಂದ ಕಳೆ ಕೀಳುವ ಯಂತ್ರವನ್ನು ತೆಗೆದುಕೊಳ್ಳುವ ಯೋಚನೆಯಿಂದ ಷಣ್ಮುಖರವರು ಮಾರುಕಟ್ಟೆಯಲ್ಲಿ ವಿಚಾರಿಸಿದಾಗ ಅದರ ಬೆಲೆಯು ಇಪ್ಪತ್ತು ಸಾವಿರದಿಂದ ಮೂವತ್ತು ಸಾವಿರದವರೆಗೆ ಇರುವುದನ್ನು ತಿಳಿದು ತಾವೇ ಯಂತ್ರವನ್ನು ತಯಾರಿಸುವ ಯೋಚನೆ ಮಾಡಿದರು. ಇದಕ್ಕಾಗಿ ಅವರು ಕಾಲು ಅಶ್ವಶಕ್ತಿಯ ಹೈಸ್ಪೀಡ್ ಸಿಂಗಲ್ ಫೇಸ್ ಮೋಟಾರ್, ಸೈಕಲ್ ಚಕ್ರಗಳು,ಕಬ್ಬಿಣದ ಪಟ್ಟಿಗಳು. ವೈರ್, ಬೇರಿಂಗ್, ಕಬ್ಬಿಣದ ಬ್ಲೇಡ್‌ಗಳು ಹಾಗೂ ಸ್ವಿಚ್ ಬಳಸಿ ಕಳೆ ಕತ್ತರಿಸುವ ಯಂತ್ರವನ್ನು ತಯಾರು ಮಾಡಿದ್ದಾರೆ. ಯಂತ್ರಕ್ಕೆ ಜೋಡಿಸಿರುವ ಹ್ಯಾಂಡಲ್‌ನ ಸಹಾಯದಿಂದ ಯಂತ್ರವನ್ನು ಹುಲ್ಲು ಹಾಗೂ ಕಳೆ ಗಿಡಗಳಿರುವಲ್ಲಿಗೆ ತೆಗೆದುಕೊಂಡು ಹೋಗಿ ಚಾಲೂ ಮಾಡಿದರೆ ಯಂತ್ರದ ಬ್ಲೇಡ್‌ಗಳು ಕೆಲವೇ ಕ್ಷಣಗಳಲ್ಲಿ ಕಳೆಯನ್ನು ಕತ್ತರಿಸಿ ಹಾಕುತ್ತದೆಯಂತೆ. ಒಂದೂವರೆಯಿಂದ ಎರಡು ಎಕರೆಯಲ್ಲಿನ ಕಳೆ ತೆಗೆಯಲು ಕೇವಲ ಎರಡರಿಂದ ಮೂರು ಯೂನಿಟ್ ವಿದ್ಯುಚ್ಛಕ್ತಿ ಬಳಕೆಯಾಗುತ್ತದೆ. ಪೆಟ್ರೋಲ್‌ನಿಂದಲೂ ಕೆಲಸ ಮಾಡುವ ಯಂತ್ರವನ್ನು ತಯಾರಿಸಬಹುದು ಎನ್ನಲಾಗಿದೆ. ಆದರೆ ರೈತರಿಗೆ ಪೆಟ್ರೋಲ್‌ಗಿಂತ ವಿದ್ಯುತ್ ಕಡಿಮೆ ದರದಲ್ಲಿ ಸಿಗುವುದರಿಂದ, ವಿದ್ಯುತ್‌ಚ್ಛಕ್ತಿಯಿಂದಲೇ ಕೆಲಸ ಮಾಡುವ ಯಂತ್ರವು ಲಾಭದಾಯಕವಾಗಿರುತ್ತದೆ ಎಂದು ಹೇಳಿದ್ದಾರೆ. ಇವರು ಯಂತ್ರವನ್ನು ಮೂರು ತಿಂಗಳಿಂದ ತಮ್ಮ ತೋಟದಲ್ಲಿ ಬಳಸುತ್ತಿದ್ದಾರೆ. ಈ ಯಂತ್ರವು ಅಲ್ಲಿನ ಸುತ್ತ ಮುತ್ತಲಿನ ರೈತರ ಗಮನವನ್ನು ಸೆಳೆಯುತ್ತಿದ್ದು ಈಗಾಗಲೇ ಷಣ್ಮುಖರವರಿಗೆ ಹಲವು ಕರೆಗಳು ಬಂದಿವೆಯಂತೆ. ಕಡಿಮೆ ಬೆಲೆಯಲ್ಲಿ ಸಿಗುವಂತ ಈ ಯಂತ್ರವನ್ನು ಹಲವರು ತಯಾರಿಸಿಕೊಡಲು ಕೇಳಿಕೊಂಡಿದ್ದಾರಂತೆ. *ಹೆಚ್ಚಿನ ವಿವರಗಳಿಗೆ ಷಣ್ಮುಖರವರನ್ನು ಸಂಪರ್ಕಿಸಬೇಕಾದ ವಿಳಾಸ ಎಮ್. ಎಸ್.ಷಣ್ಮುಖ,ಶ್ರೀ ನಾರದಾ ಆಗ್ರೋ ಸೆಂಟರ್, ಮುಖ್ಯ ರಸ್ತೆ, ಸಂತೆಬೆನ್ನೂರು,ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಫೋನ್ ನಂ -9448154335.*

ಹೊಸ ನುಗ್ಗೆ ತಳಿ

ಧಾರವಾಡದ ನಿಜಗುಣಪ್ಪ ವಿ. ಪಟ್ಟಣ ಶೆಟ್ಟಿಯವರು ಹೊಸ ನುಗ್ಗೆ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ತೋಟಗಾರಿಕೆಯಲ್ಲಿ ಹೊಸದನ್ನು ಕಂಡು ಕೊಳ್ಳುವ ಅಭಿರುಚಿಯೇ ಇದಕ್ಕೆ ಕಾರಣವೆಂದು ಹೇಳಿದ್ದಾರೆ. ಐದಾರು ವರ್ಷಗಳ ಹಿಂದೆ ಮನೆಯ ಉಪಯೋಗಕ್ಕೆಂದು ಸ್ಥಳೀಯ ನುಗ್ಗೆ ಬೀಜಗಳನ್ನು ನಾಟಿ ಮಾಡಿದ್ದರು. ಅವುಗಳ ಎತ್ತರದಲ್ಲಿ ವ್ಯತ್ಯಾಸವಿದ್ದುದರಿಂದ ಗಿಡ್ಡ ಸಸಿಗಳ ಬೀಜ ಸಂಗ್ರಹಿಸಿ ಮರು ನಾಟಿ ಮಾಡಿದರು. ಇದೇ ರೀತಿ ಆಯ್ಕೆ ಪದ್ಧತಿಯನ್ನು ಅನುಸರಿಸಿ 4-5 ವರ್ಷಗಳಲ್ಲಿ ಈ ತಳಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ತಳಿಗೆ ಅವರು *PD-1*(ಪಟ್ಟಣ ಶೆಟ್ಟಿ ಧಾರವಾಡ -1) ಎಂದು ಹೆಸರಿಟ್ಟಿದ್ದಾರೆ. ಈ ಗಿಡದ ಹೂವು, ಎಲೆ ಮತ್ತು ಕಾಯಿಗಳನ್ನು ತರಕಾರಿಯಾಗಿ, ಔಷಧಿಯಾಗಿ, ಅಲ್ಲದೆ ಗಾಳಿ ತಡೆ, ದನಗಳಿಗೆ ಆಹಾರವಾಗಿಯೂ ಬಳಸಬಹುದು. ಕಾಯಿಗಳ ಉದ್ದ 60 ರಿಂದ 80ಸೆಂ.ಮೀ. ಇದ್ದು ಒಂದು ಕೆ.ಜಿ.ಗೆ 6-8 ಕಾಯಿಗಳು ಲಭ್ಯವಾಗುತ್ತವೆ. ಈ ಕಾಯಿಗಳ ತೊಗಟೆ ತೆಳುವಾಗಿದ್ದು ತಿರುಳಿನ ಪ್ರಮಾಣ ಹೆಚ್ಚಾಗಿದ್ದು ರುಚಿಕಟ್ಟಾಗಿರುತ್ತದೆ. ಎರಡು ವರ್ಷಗಳಿಂದ ಇದೇ ಕಾಯಿಗಳನ್ನು ಉಪಯೋಗಿಸುತ್ತಿದ್ದು ನೆರೆಹೊರೆಯವರು ಕೂಡಾ ಉಪಯೋಗಿಸಿ ಒಳ್ಳೆಯ ಅಭಿಪ್ರಾಯ ಸೂಚಿಸಿದ್ದಾರೆ. ಈ ತಳಿಯ ನಿರ್ವಹಣೆ ವೆಚ್ಚ ಕಡಿಮೆಯಾಗಿದ್ದು ಅಧಿಕ ಇಳುವರಿ ಕೊಡುತ್ತದೆ. ವರ್ಷವೊಂದರಲ್ಲೇ ಫಸಲು ಆರಂಭ. ಗಿಡವೊಂದರಲ್ಲಿ ಪ್ರಥಮ ವರ್ಷ 300 ಕ್ಕೂ ಅಧಿಕ ಕೋಡುಗಳು, ಎರಡನೇ ವರ್ಷ 500 ಕ್ಕೂ ಹೆಚ್ಚು, ವರ್ಷದಲ್ಲಿ ಎರಡು ಭಾರಿ ಫಸಲು ಹಾಗೂ ಉತ್ತಮ ಗುಣಮಟ್ಟವಿರುವುದರಿಂದ ರೈತರಿಗೆ ಲಾಭದಾಯಕ ವಾಗುತ್ತದೆ. ಪ್ರತಿ ಇಳುವರಿಯ ನಂತರ 5 ಅಡಿ ಅಂತರದ ಮೇಲಿನ ಟೊಂಗೆಗಳನ್ನು ಚಾಟನಿ ಮಾಡಬೇಕು. ಸಾವಯವ ಗೊಬ್ಬರ ಹಾಕಬೇಕು. ಕುರಿ ಗೊಬ್ಬರ ಹಾಕುವುದು ಉತ್ತಮ. ಮಿತವಾದ ನೀರಿನ ಪೂರೈಕೆ. ಈ ತಳಿಯು ಬೆಳವಣಿಗೆಯಲ್ಲಿ ಗಿಡ್ಡವಾಗಿದ್ದು, ಅಲ್ಪ ಅವಧಿ ಯಲ್ಲಿಯೇ ಅಧಿಕ ಇಳುವರಿ ಕೊಡುವ ಇದು ವಾಣಿಜ್ಯ ಬೆಳೆಯಾಗಿ ಬೆಳೆಯಲು ಉತ್ತಮ ತಳಿಯಾಗಿರುತ್ತದೆ. *ಹೆಚ್ಚಿನ ವಿವರಗಳಿಗೆ ನಿಜಗುಣಪ್ಪ ವಿ . ಪಟ್ಟಣ ಶೆಟ್ಟಿಯವರನ್ನು (0836) 2472104, ಮೊಬೈಲ್ : 9448113587 ಗೆ ಸಂಪರ್ಕಿಸಬಹುದು.* (ಹಿಂದೆ ಹಿತ್ತಲ ಗಿಡ ಪೈರು 11,ಕೊಯಿಲು 2 ರಲ್ಲಿ ಪಟ್ಟಣಶೆಟ್ಟಿಯವರ ನುಗ್ಗೆ ತಳಿ ಬಗ್ಗೆ ಸ್ವಲ್ಪ ವಿವರ ಕೊಡಲಾಗಿತ್ತು. ಈ ಸಂಚಿಕೆಯಲ್ಲಿ ಇನ್ನೂ ಹೆಚ್ಚಿನ ವಿವರ ನೀಡಲಾಗಿದೆ.)

ಮಾಳಂಜಿ ಅಪ್ಪೆ ಮಾವಿನ ತಳಿ

ಶಿರಸಿ ತಾಲೂಕಿನ ಮಾಳಂಜಿಯಲ್ಲಿ ಕೆಳಗಿನ ಮನೆ ಕುಟುಂಬದವರಾದ ನಾಗಪ್ಪ ನಾಯ್ಕರ ಜಮೀನಿನ ಅಂಚಿನಲ್ಲಿ, ಮಿಡಿ ಮಾವಿನ ಮರವಿದೆ. ಈ ಮರದ ಕಾಯಿಗಳು ಜೀರಿಗೆಯ ಸುವಾಸನೆ ಹೊಂದಿದ್ದು ಮೂರು-ನಾಲ್ಕು ವರ್ಷಗಳ ಅನಂತರವೂ ಇದರ ಅಪ್ಪೆ ಹುಳಿ ಈ ಸುವಾಸನೆ, ರುಚಿ ಹಿಡಿದಿಟ್ಟಿರುತ್ತದೆ.ಇದರ ಈ ಗಟ್ಟಿತನ, ತಾಜಾ ಅನುಭವದಿಂದಾಗಿ ಮಾಳಂಜಿ ಅಪ್ಪೆಗೆ ಗ್ರಾಹಕರು ಪ್ರಥಮ ಆದ್ಯತೆ ನೀಡಿದ್ದಾರೆ. ಇದರ ಖ್ಯಾತಿ ಶಿರಸಿ ಸಿದ್ದಾಪುರ, ಶಿವಮೊಗ್ಗ, ದಕ್ಷಿಣ ಕನ್ನಡದ ತನಕ ಹಬ್ಬಿದೆ. ಶಿರಸಿ ತಾಲೂಕಿನ 30 ಹಳ್ಳಿಗಳ ಜನರು ಈ ಮರದ ಮಿಡಿ ಕೊಯ್ಲಿನ ಸಂದರ್ಭದಲ್ಲಿ ತಪ್ಪದೆ ಹಾಜರಿರುತ್ತಾರೆ. ಹದಿನಾಲ್ಕು ವರ್ಷಗಳ ಹಿಂದೆ ಮಾಳಂಜಿ ಮಾವಿನ ಮರದ ಉನ್ನತ ಗುಣ, ಪ್ರಸಿದ್ಧಿಗೆಬಂದಾಗಿನಿಂದಕಾಯಿಕೊಯ್ಲಿನದಿನದಂದು ಇಡೀದಿನಮಾವಿನ ಮರದ ಕೆಳಗೆ ಜನ ಜಾತ್ರೆಯಾಗಿರುತ್ತದೆ.ಆಸಕ್ತರೆಲ್ಲರಿಗೂ ಮಿಡಿ ದೊರಕಲೆಂದು ಮರದ ಮಾಲೀಕರು ಮತ್ತು ಗಿರಾಕಿಗಳು ಒಮ್ಮತದಿಂದ ಕೊಯ್ಲಿನ ನಿಯಮ ರೂಪಿಸಿದ್ದಾರೆ. ಮಿಡಿಅಣಲೆಕಾಯಿಗಾತ್ರದಷ್ಟು ಬೆಳೆದುಕೊಂಡಾಗ ಮಾರ್ಚ್ ಅಥವಾ ಎಪ್ರಿಲ್ ಮೊದಲ ವಾರದಂದು ಒಂದು ದಿನ ಕೊಯ್ಲು ಮಾಡುತ್ತಾರೆ. ಅಂದು ಬೆಳಗಿನಿಂದಲೇ ನಾಲ್ಕೈದು ಜನರು ಮರ ಏರಿ ಕೊಯ್ಲು ಆರಂಭಿಸುತ್ತಾರೆ. ಮಿಡಿ ತುಂಬಿದ ಚೀಲವನ್ನು ಹಗ್ಗದ ಮೂಲಕ ನೆಲಕ್ಕೆ ಇಳಿಬಿಡುತ್ತಾರೆ. ಈ ಮರದಿಂದ 15 ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಮಿಡಿಲಭ್ಯ. 40 ಸಾವಿರ ತನಕ ಮಿಡಿ ಬಂದದ್ದು ದಾಖಲೆ. ನೂರು ಮಿಡಿಗೆ 70 ರೂ. ದರದಲ್ಲಿ ಮಾರಾಟ ಮಾಡುವ ನಾಗಪ್ಪ ನಾಯ್ಕರು " ಈ ಮರ ನಮ್ಮ ಕುಟುಂಬಕ್ಕೆ ದುಡಿಮೆ ಮಾಡಿಕೊಡುತ್ತದೆ. ನಮ್ಮ ಪಾಲಿಗೆ ಈ ಮರ ದುಡಿಯುವ ನಾಲ್ಕನೇ ಜೀವವಾಗಿದೆ " ಎಂದು ಹೇಳುತ್ತಾರೆ.ವರ್ಷ ಬಿಟ್ಟು ವರ್ಷಕ್ಕೆ ಜಾಸ್ತಿ ಫಲ ನೀಡುವ ಮಾವಿನ ಮರ ಎರಡು ವರ್ಷಗಳ ಹಿಂದೆ 35 - 40 ಸಾವಿರ ರೂಪಾಯಿ ಅಚ್ಚರಿಯ ಆದಾಯ ನೀಡಿದೆ. ಇದರ ಖ್ಯಾತಿಗೆ ಕಾರಣ ಈ ತಳಿ ಪ್ರತಿಷ್ಠಿತ ಜೀರಿಗೆ ಪರಿಮಳದ ಜೊತೆಗೆ ಅತಿಯಾದ ಹುಳಿ ಅಂಶ ಹೊಂದಿರುವುದು. ಅಷ್ಟು ಹುಳಿ ಅಂಶವೇ ತಾಳಿಕೆ - ಬಾಳಿಕೆ, ರುಚಿಯನ್ನು ನೀಡಿರಬಹುದು. ಹಲವರು ಈ ಮರದ ಉಪ್ಪಿನ ಕಾಯಿಯು ಐದಾರು ವರ್ಷಗಳ ತನಕ ಕೆಡದಂತೆ ತಾಜಾವಾಗಿ ಇರುವುದನ್ನು ಹೇಳಿದ್ದಾರೆ. ಸುಮಾರು ನೂರು ವರ್ಷಗಳಷ್ಟು ಪುರಾತನವಾಗಿರುವ ಈ ಮಾವಿನ ಮರವು ಸುತ್ತಲಿನ ಜನರ ಪ್ರೀತಿ ಗಳಿಸಿ,ಇದರ ಉಪ್ಪಿನಕಾಯಿ ಕಳೆದ ನಾಲ್ಕು ದಶಕಗಳಿಂದಲೂ ಬಳಕೆಯಾಗುತ್ತಿದೆ. ಅಂದಿನ ದಿನಗಳಲ್ಲಿ ಅಡಿಕೆ ಕೊಟ್ಟು ಬದಲಾಗಿ ಮಿಡಿ ಪಡೆಯುವ, ವಸ್ತು ವಿನಿಮಯ ಪದ್ಧತಿ ಪೂರ್ವಜರ ಸಹಬಾಳ್ವೆಯ ದ್ಯೋತಕವಾಗಿದ್ದವು. ಇಂದು ಮಾಳಂಜಿ ಮಾಮಿಡಿಗೆ ಅಡಿಕೆಯಷ್ಟೇ ಮೌಲ್ಯವಿದೆ. *ಹೆಚ್ಚಿನ ಮಾಹಿತಿಗೆ ನಾಗಪ್ಪ ಬಂಗಾರ್ಯಪ್ಪ ನಾಯ್ಕ ಮಾಳಂಜಿ,ಪೋ: ಕುಪಗದ್ದೆ ,ಶಿರಸಿ ತಾಲೂಕು, ಉತ್ತರ ಕನ್ನಡ ಜಿಲ್ಲೆ, ಇವರನ್ನು ಸಂಪರ್ಕಿಸಬಹುದು.*

ವಿಶಿಷ್ಟವಾದ ಭತ್ತದ ತಳಿ 'ಕೋಮಲ್ ಚಾವಲ್'

ಸಾಮಾನ್ಯವಾಗಿ ಅನ್ನ ಮಾಡಬೇಕೆಂದರೆ ಅಕ್ಕಿಯನ್ನು ಬೇಯಿಸಬೇಕು. ಆದರೆ ತೊಳೆದು ಪಾತ್ರೆಯಲ್ಲಿ ಕೆಲಕಾಲ ನೆನೆಸಿಟ್ಟರೆ ಸಾಕು, ಅನ್ನ ಸಿದ್ಧವಾಗುವಂತಹ ಅಕ್ಕಿಯನ್ನು ನೀವು ಕೇಳಿರುವಿರೋ?ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಸಾವಯವ ವಾಣಿಜ್ಯ ಮೇಳದಲ್ಲಿ ಅಸ್ಸಾಂನ ಮಳಿಗೆಯಲ್ಲಿ ಎರಡು ಭತ್ತದ ತಳಿಗಳನ್ನು ಪ್ರದರ್ಶಿಸಲಾಗಿತ್ತು. ಒಂದು ಬಾಸ್ಮತಿ ತರಹದ್ದೇ ಆದ ಪರಿಮಳಯುಕ್ತ ತಳಿ ಬೋರಾ ಭತ್ತ , ಇನ್ನೊಂದು ಕೋಮಲ್ ಚಾವಲ್. ಇವನ್ನು ಬೆಳೆದಿರುವ ರೈತರಾದ ನೇತ್ರಪ್ರಸಾದ ಶರ್ಮಾ ಅವರ ಪ್ರಕಾರ ಕೋಮಲ್ ಚಾವಲ್ ಒಂದು ಜವಾರಿ ಅಥವಾ ನಾಟಿ ತಳಿಯಾಗಿದ್ದು, ಇದನ್ನು ನೀರಿನಲ್ಲಿ ಬೇಯಿಸದೇ ಚೆನ್ನಾಗಿ ತೊಳೆದು ಅರ್ಧತಾಸು ಹಾಗೇ ಇಟ್ಟರೆ ಅನ್ನ ಸಿದ್ಧವಾಗುತ್ತದೆ ! ಇಂತಹ ತಳಿಯನ್ನು ಅಸ್ಸಾಂನ ಲಿಖಿಮ್‌ಪುರ ಮತ್ತು ದಾರಂ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಈ ಜಿಲ್ಲೆಗಳಲ್ಲಿ ಸಿಕ್ಕಷ್ಟು ಉತ್ತಮ ಇಳುವರಿಯು ಬೇರೆ ಕಡೆಗಳಲ್ಲಿ ಸಿಗುತ್ತಿಲ್ಲವಂತೆ. ಬಹುಶಃ ಕೋಮಲ್ ಚಾವಲ್ ಈ ಎರಡು ಜಿಲ್ಲೆಗಳ ವಾತಾವರಣಕ್ಕೆ ಹೊಂದಿಕೊಂಡಿರಬಹುದು. ಈ ತಳಿಯ ಮತ್ತೊಂದು ವೈಶಿಷ್ಟ್ಯವೆಂದರೆ ರಾಸಾಯನಿಕ ಬಳಸಿದರೆ ಇಳುವರಿ ತೀವ್ರ ಪ್ರಮಾಣದಲ್ಲಿ ಕಡಿಮೆ ಯಾಗುವುದಲ್ಲದೆ ಅನ್ನವಾಗಿ ಮಾರ್ಪಾಡಾಗುವುದಿಲ್ಲವಂತೆ. ಹಾಗಾಗಿ ಇದು ಸಾವಯವ ಕೃಷಿ ಪದ್ಧತಿಯಲ್ಲಿ ಒಳ್ಳೆಯ ಇಳುವರಿ ನೀಡುತ್ತಿದೆ. ಇದನ್ನು ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯುತ್ತಿದ್ದು , ಎಕರೆಗೆ 10 ರಿಂದ 12 ಕ್ವಿಂಟಲ್ ಇಳುವರಿ ನೀಡುತ್ತಿದೆ. ರೈತರು ಜುಲೈ ತಿಂಗಳಲ್ಲಿ ಸಸಿ ಮಡಿ ಮಾಡಿಕೊಂಡು ತಿಂಗಳ ಬಳಿಕ ನಾಟಿ ಮಾಡಿದರೆ, ಡಿಸೆಂಬರ್ ತಿಂಗಳಲ್ಲಿ ಕಟಾವಿಗೆ ಬರುತ್ತದೆ. ಆದರೆ ಕೆಲವರು ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ನಾಟಿ ಮಾಡಿದರೂ ಕೂಡ ಡಿಸೆಂಬರ್ ತಿಂಗಳಿಗೇ ಕಟಾವಿಗೆ ಸಿದ್ಧವಾಗುತ್ತದೆ ಎನ್ನುತ್ತಾರೆ. ಅಕ್ಕಿಯನ್ನು ಹೆಚ್ಚಾಗಿ ಬಳಸುವ ಅಸ್ಸಾಂನ ಜನರು, ಅಕ್ಕಿಯಿಂದ ನಾನಾ ತರಹದ ಖಾದ್ಯ, ಸಿಹಿ ಪದಾರ್ಥ ತಯಾರಿಸಲು, ಕೋಮಲ್ ಚಾವಲ್ ಬಳಕೆಗೆ ಪ್ರಮುಖ ಆದ್ಯತೆ ನೀಡಿದ್ದಾರೆ. *ಹೆಚ್ಚಿನ ಮಾಹಿತಿಗೆ ಕೃಷಿಕ ನೇತ್ರಪ್ರಸಾದ ಶರ್ಮಾ ಅವರನ್ನು ಮೊಬೈಲ್ : 09435517019 ಗೆ ಸಂಪರ್ಕಿಸಬಹುದು.*
ಮೂಲ : ಪ್ರಜಾವಾಣಿ, 27 ಡಿಸೆಂಬರ್ 2007.

ದೇಶಿ ತಳಿಯ ಪಟಾವಳಿ ಕಬ್ಬು

ದೇಶಿ ತಳಿಯಾದಂತಹ ಪಟಾವಳಿ ಕಬ್ಬು ಅತ್ಯಂತ ಮೃದು ಮತ್ತು ರಸಭರಿತವಾಗಿದ್ದು, ಸಾವಯವ ಕೃಷಿಗೆ ಹೆಚ್ಚು ಹೊಂದಿಕೊಳ್ಳುತ್ತದೆ. ಈ ಕಬ್ಬಿನ ಕೋಲುಗಳ ಮೇಲೆ ನಸುಗೆಂಪು, ಹಳದಿ ಹಾಗೂ ಹಸಿರು ಬಣ್ಣದ ಪಟ್ಟಿಗಳನ್ನು ಹೊಂದಿದ್ದು, ಆರರಿಂದ ಏಳು ಅಡಿಯವರೆಗೆ ಬೆಳೆಯುತ್ತವೆ. ರಸ ಮಾಡುವ ಯಂತ್ರದಲ್ಲಿ ಎರಡು ಮೂರು ಸಾರಿ ಹಾಕಿ ಹಿಂಡಿದರೂ ತುಂಡಾಗುವುದಿಲ್ಲ ಮತ್ತು ರಸವನ್ನು 4 -5 ಗಂಟೆಗಳವರೆಗೆ ಇಟ್ಟರೂ ಕಪ್ಪಾಗುವುದಿಲ್ಲ. ಇದರ ಮೂಲ ಹೊಳೆನರಸೀಪುರ ತಾಲೂಕಿನ ಬಾಗೀವಾಳು ಗ್ರಾಮವಾಗಿದೆ. ಮೊದಲೆಲ್ಲಾ ಪಟಾವಳಿ ಕಬ್ಬು ಜಾತ್ರೆಗಳಿಗೆ, ಸಂತೆಗಳಿಗೆ ಸುತ್ತ ಮುತ್ತಲ ಪಟ್ಟಣಗಳಿಗೆ ಮತ್ತು ಮಂಗಳೂರಿಗೂ ಮಾರಾಟವಾಗುತ್ತಿತ್ತು. ಪಟಾವಳಿ ಕಬ್ಬಿನ ನಾಟಿಗೆ ಫೆಬ್ರವರಿ 15 ರಿಂದ ಮಾರ್ಚ 15 ರ ವರೆಗೆ ಸಕಾಲ. ಕಬ್ಬು ನೆಟ್ಟ ಒಂಬತ್ತು ತಿಂಗಳಿಗೆ ಕಟಾವಿಗೆ ಬರುತ್ತದೆ. ಕಬ್ಬು ಬೆಳೆಯಲು ಫಲವತ್ತಾದ ನೀರಾವರಿ ವ್ಯವಸ್ಥೆ ಇರುವ ಜಮೀನನ್ನು ಮಣ್ಣು ಹುಡಿಯಾಗುವಂತೆ ಉಳಿಮೆ ಮಾಡಿಕೊಂಡು, ಎಕರೆಗೆ 20 ಗಾಡಿ ಕೊಟ್ಟಿಗೆ ಗೊಬ್ಬರ ಹಾಕಬೇಕು. ಗುಣಿ ಪದ್ಧತಿಯಾದರೆ ಸಾಲಿನಿಂದ ಸಾಲಿಗೆ ಮೂರು ಅಡಿ, ಗುಣಿಯಿಂದ ಗುಣಿಗೆ ಎರಡುವರೆ ಅಡಿ ಅಂತರಗಳನ್ನು ಮಾಡಿಕೊಳ್ಳಬೇಕು. ಗುಣಿಗಳಿಗೆ ಕೊಟ್ಟಿಗೆ ಗೊಬ್ಬರ ಬೆರೆಸಿ, ಒಂದು ಗುಣಿಗೆ ಎರಡು ಬೀಜಗಳಂತೆ ಎಕರೆಗೆ ಎಂಟು ಸಾವಿರ ಬೀಜಗಳನ್ನು ನಾಟಿ ಮಾಡಬೇಕು. ಗುಣಿಗೆ ಒಂದು ಕೊಡದಂತೆ ನಿತ್ಯ ನೀರು ಹಾಕಬೇಕು. ತೇವ ಕಡಿಮೆಯಾದರೆ ಗೆದ್ದಲು ಬರುವ ಸಾಧ್ಯತೆ ಹೆಚ್ಚು.ಸಾಲು ಪದ್ಧತಿಯಾದರೆ ಸಾಲಿನಿಂದ ಸಾಲಿಗೆ ಮೂರು ಅಡಿ ಅಗಲ ಹಾಗೂ ಗುಣಿಯಿಂದ ಗುಣಿಗೆ ಎರಡುವರೆ ಅಡಿ ಅಂತರದ ಸಾಲುಗಳನ್ನು ಮಾಡಿಕೊಳ್ಳಬೇಕು. ಕೊಟ್ಟಿಗೆ ಗೊಬ್ಬರವನ್ನು ಸಾಲಿಗೆ ಬೆರೆಸಿ ಕಬ್ಬಿನ ಬೀಜ ಮುಚ್ಚಿ, ನೀರು ಹಾಯಿಸ ಬೇಕು. ಪಟಾವಳಿ ಕಬ್ಬು ಬಹಳ ಮೃದುವಾಗಿರುವುದರಿಂದ ಇಲಿ ಮತ್ತು ನರಿಗಳು ಕಬ್ಬು ತಿನ್ನಲು ಬರುತ್ತವೆ. ಆದ್ದರಿಂದ ಕಬ್ಬು ನಾಲ್ಕು ಅಡಿ ಬೆಳೆದ ಮೇಲೆ, ಗುಣಿಗೆ ಕೆಳಗಿನಿಂದ ಮೇಲಕ್ಕೆ ಅದರದೇ ಒಣ ಹಾಗೂ ಹಸಿರು ಗರಿಗಳಿಂದ ಮುರಿ ಸುತ್ತುವುದರಿಂದ ಅವುಗಳ ಹಾವಳಿ ತಡೆಗಟ್ಟಬಹುದು.ಹಾಗೂ ಇದರಿಂದ ಕಬ್ಬಿನ ಬಣ್ಣ ಹೆಚ್ಚುತ್ತದಲ್ಲದೇ ಸಾಲುಗಳಲ್ಲಿ ನಡೆಯಲು ಅನುಕೂಲ ವಾಗುತ್ತದೆ. ಮುರಿ ಸುತ್ತಿದ ನಂತರ ಎರಡು ಬಾರಿ ಪರಿ ಏರು (ಸಾಲಿನ ಮಧ್ಯ ಇರುವ ಮಣ್ಣನ್ನು ಕಬ್ಬು ಇರುವ ಸಾಲಿಗೆ ಏರಿಸುವುದು) ಹಾಕಬೇಕು. ಇದರಿಂದ ನೀರು ಹಾಯಿಸಲು ಸುಲಭವಾಗುತ್ತದೆ ಮತ್ತು ಕಬ್ಬಿನ ಕೋಲುಗಳು ಗಾಳಿಗೆ ಬೀಳುವುದಿಲ್ಲ. ಆದರೆ ಈಗ ಪಟಾವಳಿ ಕಬ್ಬನ್ನು ಬೆಳೆಯುವವರೇ ವಿರಳವಾಗಿದ್ದಾರೆ. ಕಾರಣ ಈ ಕಬ್ಬಿನ ಬೆಳವಣಿಗೆ ಸ್ವಲ್ಪ ನಿಧಾನ. ಕಟಾವು ಮಾಡಿದ ನಾಲ್ಕೈದು ದಿನಗಳ ನಂತರ ಕಬ್ಬಿನ ರಸ ಹುಳಿ ಬರಲು ಪ್ರಾರಂಭವಾಗುತ್ತದೆ. ಅಷ್ಟರೊಳಗೆ ಮಾರಾಟ ಮಾಡಬೇಕು. ಹೀಗಾಗಿ ಮಧ್ಯವರ್ತಿಗಳು ಪಟಾವಳಿ ಕಬ್ಬನ್ನು ಇಷ್ಟಪಡದಿರುವುದರಿಂದ ಪಟಾವಳಿ ಕಬ್ಬು ನಿಧಾನವಾಗಿ ಕಾಣೆ ಯಾಗುತ್ತಿದೆ.

ಈ ಪಟಾವಳಿ ಕಬ್ಬನ್ನು ಬೆಳೆದಿರುವ ಉಣ್ಣೇನಹಳ್ಳಿ ಗ್ರಾಮದ, ವಸುಂಧರೆ ಜೈವಿಕ ಕೃಷಿಕರ ಸೇವಾ ಸಂಸ್ಥೆಯ ಸದಸ್ಯ, 'ಪುಟ್ಟಸೋಮಾರಾಧ್ಯರಿಗೆ ಈಗಾಗಲೇ ಅನೇಕ ಕರೆಗಳು ಬಂದಿದ್ದು, ಸುಮಾರು ಏಳು ಜನರಿಗೆ ಇದರ ಬೀಜಗಳನ್ನು ವಿತರಣೆ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗೆ : ಹೊಯ್ಸಳ ಎಸ್.ಅಪ್ಪಾಜಿ, ಪ್ರೆಸಿಡೆಂಟ್ ಅಂಡ್ ಹೆಡ್, ವಸುಂಧರ ಜೈವಿಕ ಕೃಷಿಕರ ಸೇವಾ ಸಂಸ್ಥೆ (ರಿಜಿಸ್ಟರ್ಡ್), ಉಣ್ಣೇನ ಹಳ್ಳಿ, ಬಿ.ಕೆ.ನ ಹಳ್ಳಿ–ಪೋಸ್ಟ್, ಹೊಳೆನರಸೀಪುರ ತಾಲೂಕು – 573211, ಹಾಸನ ಜಿಲ್ಲೆ, ಫೋ ನಂ ; 9449462397

ಬೆಂಗಳಿ ವೆಂಕಟೇಶರ ಮಡಹಾಗಲ ತಳಿ ಅಭಿವೃದ್ಧಿ

ಮಡಹಾಗಲವು *(Momordica diaca)* ಮೂಲತಃ ಮುಳ್ಳನ್ನು ಹೊಂದಿರುವ ಕಾಡು ಹಾಗಲಕಾಯಿ. ಇದು ತಿಳಿ ಹಸಿರು ಬಣ್ಣ ಹೊಂದಿದ್ದು, ಚೊಗರು ಮಿಶ್ರಿತ ಸಿಹಿ ರುಚಿಯನ್ನು ಹೊಂದಿರುತ್ತದೆ, ಹಾಗೂ ಯಥೇಚ್ಛ ಬೀಜವೂ ಇರುತ್ತದೆ. ಮಲೆನಾಡ ಪಶ್ಚಿಮ ಘಟ್ಟಗಳಲ್ಲಿ ಹಿಂದೆ ಈ ಸಸ್ಯ ಹೇರಳವಾಗಿತ್ತು. ಶಕ್ತಿ ಮತ್ತು ವೀರ್ಯವರ್ಧಕವೆಂದು ಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿರುವ ಮಡಹಾಗಲ ಗೌಡ ಸಾರಸ್ವಥ ಬ್ರಾಹ್ಮಣರ ನೆಚ್ಚಿನ ತರಕಾರಿ. ಆದರೆ ಈಗ ಇದರ ಸಂತತಿ ಅಳಿವಿನಂಚಿನಲ್ಲಿದೆ.ಶಿರಸಿ ತಾಲ್ಲೂಕಿನ ಒಣಿಕೇರಿಯವರಾದ ಬೆಂಗಳಿ ವೆಂಕಟೇಶರವರು ಹಿಂದೊಮ್ಮೆ ಆಸ್ಟ್ರೇಲಿಯಾ ದೇಶದಿಂದ ಒಂದು ಹಾಗಲಕಾಯಿ ಬೀಜವನ್ನು ತರಿಸಿದರು. ಈ ಗಿಡದಿಂದ ಸುಮಾರು 2 ರಿಂದ 2.5 ಅಡಿ ಉದ್ದದ ಹಾಗಲಕಾಯಿ ಬೆಳೆಯುತ್ತಿತ್ತು. ಆದರೆ ಅಲ್ಲೇ ಸಮೀಪದಲ್ಲಿದ್ದ ಮಡಹಾಗಲದ ಗಂಡು ಹೂವಿನ ಪರಾಗಸ್ಪರ್ಶದಿಂದ ಈ ಆಸ್ಟ್ರೇಲಿಯನ್ ತಳಿಯಿಂದ ಬಂದ ಹಾಗಲಕಾಯಿಯ ಗಾತ್ರ ಧಿಡೀರೆಂದು ಮೂವೂಲು ಹಾಗಲಕಾಯಿಯ ಗಾತ್ರಕ್ಕೆ ಇಳಿಯಿತು. ಇದರಿಂದ ಪ್ರೇರಿತರಾದ ಶ್ರಿಯುತರು ಮಡಹಾಗಲದ ಹೆಣ್ಣು ಹೂವಿಗೆ ಆಸ್ಟ್ರೇಲಿಯನ್ ತಳಿಯ ಗಂಡು ಹೂವಿನಿಂದ ಪರಾಗಸ್ಪರ್ಶ ಮಾಡಿಸಿದರು. ಅದರಿಂದಾದ ಫಲಿತಾಂಶ ಅದ್ಭುತವಾಗಿತ್ತು. ಈ ಪರಾಗ ಸ್ಪರ್ಶದಿಂದ ಉತ್ಪತ್ತಿಯಾದ ಮಡಹಾಗಲವು ಕಡಿಮೆ ಬೀಜ ಹೊಂದಿದ್ದು, ರುಚಿಯಲ್ಲಿ ಇನ್ನೂ ಉತ್ತಮವಾಗಿರುತ್ತದೆ. ಈ ಸಸ್ಯವು 28 ಡಿಗ್ರಿ ಸೆಂಟಿಗ್ರೇಡ್ ಗಿಂತ ಹೆಚ್ಚಿನ ಉಷ್ಣತೆಯಲ್ಲಿ ಬದುಕುವುದಿಲ್ಲ. ಇದಕ್ಕೆ ನೀರಾವರಿ ಅತ್ಯಗತ್ಯ.. ಬಳ್ಳಿಯು 5 ಮೀ ಉದ್ದ ಬೆಳೆಯುತ್ತದೆ. ಒಂದು ಬಳ್ಳಿಗೆ 10 ಕೆ.ಜಿ. ಮಡಹಾಗಲವನ್ನು ಪಡೆಯಬಹುದು. ಇದರಿಂದ ಪಲ್ಯ, ಬೋಂಡಾ, ಇತ್ಯಾದಿಗಳನ್ನು ತಯಾರಿಸಬಹುದಾಗಿದೆ. ಶ್ರೇಷ್ಠ ರುಚಿಯಲ್ಲದೆ, ಇದು ಔಷಧೀಯ ಗುಣಗಳನ್ನು ಹೊಂದಿದೆ .ಸಾರಸ್ವಥರು ಕೆಜಿ ಗೆ 100-120 ರೂ. ಕೊಟ್ಟು ಇದನ್ನು ಕೊಳ್ಳುತ್ತಾರಂತೆ. ಬೆಂಗಳಿ ವೆಂಕಟೇಶರ ಮಡಹಾಗಲ ಕಲ್ಕತ್ತದವರೆಗೂ ತಲುಪುತ್ತಿದೆಯಂತೆ. ಈ ರೀತಿಯ ಸಂಕಿರಣದ ತಳಿಯನ್ನು ವೆಂಕಟೇಶರವರು ಅಭಿವೃದ್ಧಿ ಪಡಿಸಿದರಲ್ಲದೇ, ಇದರ ಸಂತತಿಯನ್ನುಳಿಸಲು ಬಹಳ ಜನರಿಗೆ ಇದರ ಬೀಜಗಳನ್ನು ಕೊಟ್ಟಿರುತ್ತಾರೆ. ಪಶ್ಚಿಮಘಟ್ಟದ ಜೀವ ವೈವಿಧ್ಯವನ್ನು ಉಳಿಸಿ ಬೆಳೆಸಲು ವೆಂಕಟೇಶರವರ ಈ ಪ್ರಯತ್ನ ಶ್ಲಾಘನೀಯ.

ಸಂಗ್ರಹ : ನಿಖಿಲ್ ಎಚ್.ಎನ್.

ವಸುಂಧರೆ ಜೈವಿಕ ಕೃಷಿಕರ ಸೇವಾ ಸಂಸ್ಥೆ

ಸಾವಯವ ಕೃಷಿಯನ್ನು ಮಾಡುತ್ತಿರುವ ರೈತರಿಗೆ ಸಹಾಯ ಮಾಡುವ ಹಾಗೂ ದೇಶೀ ತಳಿಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಹಾಸನ ಜಿಲ್ಲೆಯಲ್ಲಿ ವಸುಂಧರೆ ಜೈವಿಕ ಕೃಷಿಕರ ಸೇವಾ ಸಂಸ್ಥೆಯು ಆರಂಭವಾಗಿದೆ. ಪಟಾವಳಿ ಎಂಬ ಸ್ಥಳೀಯ ಕಬ್ಬಿನ ತಳಿ ನಿಧಾನವಾಗಿ ಕಾಣೆಯಾಗುತ್ತಿರುವ ಬಗ್ಗೆ ಎಚ್ಚೆತ್ತ ಹಾಸನದ ಬಾಗೆವಾಳು ಗ್ರಾಮದ ರೈತರು "ಜೈವಿಕ ಕೃಷಿಕರ ಸೇವಾ ಸಂಸ್ಥೆ "ಯನ್ನು 2006 ರಲ್ಲಿ ರಚಿಸಿಕೊಂಡಿದ್ದಾರೆ. ಕಬ್ಬಿನ ಜೊತೆಗೆ ತರಕಾರಿಗಳಾದ ಕಡಕತ್ತಾ ಅವರೆ, ವೆಲ್‌ವೆಟ್ ಬೀನ್ಸ್, ಡಬಲ್ ಬೀನ್ಸ್, ಸಿಹಿ ಕುಂಬಳ, ಚಟ್ಟ ಕುಂಬಳ ಹಾಗೂ ಸಣ್ಣ ಕುಂಬಳ ಬೀಜಗಳನ್ನು ಸಂಗ್ರಹಿಸಿ ವಿತರಿಸುತ್ತಿದ್ದಾರೆ. ಭತ್ತದ ಹಲವಾರು ದೇಶಿ, ತಳಿಗಳು ಈ ಸಂಸ್ಥೆಯಲ್ಲಿ ದೊರೆಯುತ್ತವೆ. ತರಕಾರಿಗಳ ಜೊತೆಗೆ ಇನ್ನೂ ಹಲವಾರು ಹಣ್ಣಿನ ಗಿಡಗಳ ಬಗ್ಗೆಯೂ ಆಸಕ್ತಿ ವಹಿಸುತ್ತಿದ್ದು, ಹಲಸಿನ ನಾನಾ ತಳಿಗಳು ಹಾಗೂ ಜೀರಿಗೆಮಾವು, ಬಿಳಿ ಮಾವು ಹೀಗೆ ಅನೇಕ ದೇಶಿ, ತಳಿಗಳ ಗಿಡಗಳನ್ನು ಕಸಿ ಮಾಡಲು ಆರಿಸಿಕೊಂಡಿದ್ದು, ಈ ವರ್ಷದಿಂದ ಕಸಿ ಮಾಡಿದ ಸಸಿಗಳನ್ನು ವಿತರಣೆ ಮಾಡುವ ಯೋಜನೆ ಹಾಕಿದ್ದಾರೆ. ಸುಮಾರು 16 ಜನರು ಶೇರುದಾರರಾಗಿರುವ ಈ ಸಂಸ್ಥೆಯ ಪ್ರಸಕ್ತ ಅಧ್ಯಕ್ಷರು ಹೊಯ್ಸಳ ಎಸ್. ಅಪ್ಪಾಜಿಯವರಾಗಿದ್ದಾರೆ.ಈ ಸಂಸ್ಥೆಯು ಬೆಂಗಳೂರಿನಲ್ಲಿರುವ ಸಹಜ ಸಮೃದ್ಧ, ಜೈವಿಕ ಸೊಸೈಟಿ, ಗ್ರೀನ್ ಫೌಂಡೇಶನ್ ಹಾಗೂ ಹಾಸನದಲ್ಲಿರುವ ಪುಣ್ಯಭೂಮಿ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದೆ. ಸಂಸ್ಥೆಗೆ ಕರ್ನಾಟಕ ಕೃಷಿ ಇಲಾಖೆಯಿಂದ ಪ್ರೋತ್ಸಾಹ ಧನ ಕೂಡಾ ಸಿಗುತ್ತಿದೆ.

ಚರ್ಮದ ಸೋಂಕಿನ ನಿವಾರಣೆಗಾಗಿ.

ಒರಿಸ್ಸಾದ 90 ವರ್ಷದ ಅಪ್ಸರಾ ಬರಿಕ್‌ರವರು ತಮ್ಮ ಹಿರಿಯರು ಕಂಡುಕೊಂಡಿರುವ ಹಲವಾರು ನಾಟಿ ಔಷಧಿಗಳನ್ನು ಈಗಲೂ ಅನುಸರಿಸುತ್ತಿದ್ದಾರೆ. ಜೊತೆಗೆ ಅಕ್ಕ -ಪಕ್ಕ ದಲ್ಲಿರುವವರಿಗೂ ಕೂಡ ಈ ಪದ್ಧತಿಗಳ ಉಪಯೋಗವನ್ನು ಹೇಳಿಕೊಡುತ್ತಾರೆ.

ದೇಹದ ಮೇಲೆ ಕಾಣಿಸಿಕೊಳ್ಳುವಂತಹ ಬೆವರು ಸಾಲೆ, ಊತ, ಮತ್ತು ನವೆಯಂತಹ ಚರ್ಮದ ಸೋಂಕುಗಳಿಗೆ ಗಿಡ ಮೂಲಿಕೆಗಳಿಂದ ಮಾಡಿರುವಂತಹ ಒಂದು ಮಿಶ್ರಣವನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇವರು ಅಳಲೇಕಾಯಿ *(Terminalia chebula Retz)*, ತಾರೇಮರ *(Terminalia bellirica Roxb)(Beleric myrobalan)*, ಮತ್ತು ಬೆಟ್ಟನೆಲ್ಲಿ *(Emblica Officinalis Gaertn (Indian gooseberry or embelic myrobalan)* ಬಳಸುತ್ತಾರೆ. ಇವುಗಳನ್ನು ಒಣಗಿಸಿ, ಪುಡಿಮಾಡಿ, ರಾತ್ರಿಯಿಡೀ ನೀರಿನಲ್ಲಿ ನೆನೆಸಿಡುತ್ತಾರೆ. ಈ ನೀರನ್ನು ಸ್ನಾನಕ್ಕೆ ಉಪಯೋಗಿಸುವುದರಿಂದ ಚರ್ಮದ ಸೋಂಕು ಗುಣವಾಗುತ್ತದೆ ಎಂದು ಹೇಳುತ್ತಾರೆ.

(ವಿ. ಸೂ : ಈ ಮೂರು ಒಣಗಿರುವಂತಹ ಹಣ್ಣುಗಳಲ್ಲಿ ಖನಿಜಾಂಶಗಳು, ಜೀವಸತ್ವಗಳು ಮತ್ತು ಆಂಟಿ ಆಕ್ಸಿಡೆಂಟ್‌ಗಳು ಹೇರಳವಾಗಿವೆ. ಇಂತಹುಗಳನ್ನು ಸಾಮಾನ್ಯವಾಗಿ ಚರ್ಮದ ರೋಗಗಳಾದಂತಹ ಇಸಬು, ಕಜ್ಜಿ, ತುರಿ, ಒಣಚರ್ಮ, ಮೊಡವೆಗಳಿಗೆ ಮತ್ತು ಮುಖದ ಮೇಲಾಗುವ ಗುಳ್ಳೆಗಳಿಗೆ ಕೂಡ ಉಪಯೋಗಿಸಬಹುದೆಂದು ಈಗಾಗಲೇ ತಿಳಿದಿರುತ್ತದೆ. ವಿವರಕ್ಕೆ http: // ayurvedanta.com/product-details ನೋಡಿರಿ.)

ಅದೇ ಕಾಶ್ಮೀರ ರಾಜ್ಯದ ವೆರಿನಾಗ್ ನಗರದ ಪರ್‌ವೇಜ್ ಅಹಮದ್ ಭಟ್‌ರವರು ಕೂಡ ಚರ್ಮದ ತೊಂದರೆಗಳಿಗೆ ಕೋಷ್ಠ *(Saussurea Costus Lipsch)*ದ ಬೇರುಗಳನ್ನು ಪುಡಿ ಮಾಡಿ, ನೀರನ್ನು ಸೇರಿಸಿ ಗಾಯಗಳಿಗೆ ಮತ್ತು ಚರ್ಮದ ಕಾಯಿಲೆಗಳಿಗೂ ಸಹ ಇದನ್ನು ಉಪಯೋಗಿಸಬಹುದು ಎಂದು ತಿಳಿಸಿದ್ದಾರೆ . ಮತ್ತು ಈ ಗಿಡವು ನಂಜು ನಾಶಕವಾಗಿಯೂ ಚರ್ಮದರೋಗಗಳಿಗೆ ಉಪಯೋಗಿಸಲಾಗುತ್ತಿದೆಯಂತೆ. (ವಿವರಕ್ಕೆ *web address : http:// www.pfaf.org/database/plants* ನೋಡಿರಿ.)



ಉಸಿರಾಟದ ತೊಂದರೆಗಳಿಗೆ

ಮೂಗು ಕಟ್ಟುವುದು *(Sinus)* ನಂತಹ ಉಸಿರಾಟದ ತೊಂದರೆವುಳ್ಳ ರೋಗಿಗಳು, ಅಂಜೂರ *(Ficus carica)* ಮತ್ತು ಬಾದಾಮಿ *(Prunus amygdalus Batsch)* ಇವುಗಳ ಮಿಶ್ರಣವನ್ನು ಜೇನಿನೊಂದಿಗೆ (ಒಂದು ಚಮಚ ದೊಡ್ಡವರಿಗೆ ಮತ್ತು ಕಾಲು ಚಮಚ ಚಿಕ್ಕವರಿಗೆ)ತೆಗೆದುಕೊಂಡರೆ ಉಪಶಮನವಾಗುತ್ತದೆ ಎಂದು ಕಾಶ್ಮೀರದ ಹಾಜಿ ಅಬ್ದುಲ್ ರೆಹಮಾನ್ ತಿಳಿಸಿದ್ದಾರೆ. ಹಿಪ್ಪೇನೇರಳೆ ಹಣ್ಣುಗಳಿಂದ ಮಾಡಿರುವ ಪಾನೀಯವನ್ನು ಗಂಟಲಿನ ಸೋಂಕು ನಿವಾರಣೆಗಾಗಿ ನೀರಿನೊಂದಿಗೆ ಬಳಸಬಹುದು ಎಂದು ಅವರು ಹೇಳಿದ್ದಾರೆ.

ಹೊಟ್ಟೆ ನೋವಿಗೆ ಗಿಡ - ಮೂಲಿಕೆಗಳ ಚಿಕಿತ್ಸೆ

ಕೋಷ್ಠದ ಬೇರುಗಳನ್ನು ಚೆನ್ನಾಗಿ ಅರೆದು, ಅದನ್ನು ಹೊಟ್ಟೆಗೆ ಹಚ್ಚಿ ಮೃದುವಾಗಿ ಮಸಾಜ್ ಮಾಡಬೇಕು. ಇದು ಹೊಟ್ಟೆ ನೋವು ನಿವಾರಿಸುವಲ್ಲಿ ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂದು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಹಿಲ್ಲರ್ ಊರಿನ ಮೊಹಮ್ಮದ್ ಹುಸೇನ್ ಗನಿಯವರು ಹೇಳುತ್ತಾರೆ. ಇವರು ಹೇಳುವ ಪ್ರಕಾರ ಈ ಬೇರನ್ನು ಸೆಳೆತ ರೋಗಕ್ಕೆ ಪ್ರತಿರೋಧಿಯಾಗಿ, ಹೊಟ್ಟೆ ನೋವಿನ ಉಪಶಮನಕಾರಿಯಾಗಿ ಹಾಗು ಎದೆ ನೋವಿಗೆ ಕೂಡ ಬಳಸಬಹುದಾಗಿದೆ.

(ವಿ .ಸೂ : ಈ ಬೇರಿನಿಂದ ಸಿಗುವಂತ ಎಣ್ಣೆಯನ್ನು ಸಂಧಿವಾತ, ಕೀಲುಗಳ ಉರಿಯೂತಕ್ಕೆ ಬಳಸಿದರೆ ಹಿತಕರವಾಗಿರುತ್ತದಲ್ಲದೇ ಪರಿಣಾಮಕಾರಿಯಾದ ಚಿಕಿತ್ಸಾ ಕ್ರಮವೂ ಆಗಿರುತ್ತದೆ. ವಿವರಕ್ಕೆ http://www.pfaf.org/database/plants ನೋಡಿರಿ.)



ಕೂದಲಿನ ತೊಂದರೆಗಳಿಗೆ ಚಿಕಿತ್ಸೆ

ಕೇರಳದ ಕರುಣಾಪುರಂ ನಗರದ ತಂಕನ ಮಣಿಯವರು ಕೂದಲಿನ ತೊಂದರೆಗಳಿಗೆ ಮತ್ತು ಕೂದಲು ಉದುರುವಿಕೆಯನ್ನು ಪರಿಹರಿಸಲು ಗಿಡಮೂಲಿಕೆಗಳಿಂದ ತಯಾರಿಸಿರುವ ತೈಲವೊಂದನ್ನು ಕಂಡುಕೊಂಡಿದ್ದಾರೆ. ಗರುಗದ ಗಿಡ (*Eclipta alba*) , ನೀರುಬ್ರಾಹ್ಮಿ , (*Bacopa monnieri*) , ಒಂದೆಲಗ (*Centella asiatica*) ಗೋರಂಟಿ (*Lawsonia intermis*) ಮತ್ತು ಒಳ್ಳೆ ನೀಲಿ (*Indigo tinctoria*) ಈ ಗಿಡಗಳ ಎಲೆಗಳನ್ನು ಅರೆದು ರಸವನ್ನು ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ತಲೆಗೆ ಹಚ್ಚಿಕೊಳ್ಳುವುದರಿಂದ ಕೂದಲಿನ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು ಎಂದು ಹೇಳಿದ್ದಾರೆ .

(ವಿ . ಸೂ : ಸಾಮಾನ್ಯವಾಗಿ ಗರುಗದ ಗಿಡದ ಎಲೆಗಳನ್ನು ಕಪ್ಪನೆಯ, ಆರೋಗ್ಯವಂತ, ಉದ್ದನೆಯ ಕೂದಲುಗಳಿಗಾಗಿ ಬಳಸಲಾಗುತ್ತಿದೆ . ಮತ್ತು ಗೋರಂಟಿ, ನೀರುಬ್ರಾಹ್ಮಿ, ಒಂದೆಲಗದ ಎಲೆಗಳನ್ನು ಕೂದಲು ರಕ್ಷಣೆಗಾಗಿ ಉಪಯೋಗಿಸಲಾಗುತ್ತದೆ. ಹಾಗೆಯೇ ಒಳ್ಳೆನೀಲಿ ಗಿಡದ ಎಲೆಗಳನ್ನು ಕೂದಲಿಗೆ ಹಾಕುವ ಬಣ್ಣತಯಾರಿಸಲು ಮತ್ತು ಕೂದಲಿಗಾಗಿ ಔಷಧಯುಕ್ತ ಎಣ್ಣೆ ತಯಾರಿಸಲು ಬಳಸಲಾಗುತ್ತಿದೆ. ವಿವರಕ್ಕೆ www.chark.com/HerbContents ನೋಡಿರಿ.)

ಮೂಲ : ಹನಿ ಬೀ , Vol 18 (2) ಎಪ್ರೀಲ್ - ಜೂನ್ 2007.

ಆಮಶಂಕೆಗೆ ಚಿಕಿತ್ಸೆ

ಕಾಶ್ಮೀರದ ಅನಂತನಾಗ್ ಜಿಲ್ಲೆಯ ಲಿಸ್ಸರ್ ಗ್ರಾಮದವರಾದ ರೂಬಿ ಜಾನ್‌ರವರ ಸಲಹೆಯಂತೆ ಆಮಶಂಕೆಯಿಂದ ಬಳಲುತ್ತಿರುವವರಿಗೆ ಗಸಗಸೆಯನ್ನು ತಣ್ಣೀರಿನಲ್ಲಿ ಅರೆದು ಕುಡಿಸುವುದು ಸೂಕ್ತ ಔಷಧಿಯಂತೆ.



ಕೀಲು ನೋವುಗಳಿಗೆ ಚಿಕಿತ್ಸಾಕ್ರಮ

ಕಾಶ್ಮೀರದ ಅನಂತನಾಗ್ ಜಿಲ್ಲೆಯ ಕ್ರೇರಿ ಊರಿನ ಅಬ್ದುಲ್ ಗನಿ ಚೌಪನ್‌ರವರು ಸ್ಥಳೀಯವಾಗಿ ಬೆಳೆಯುವಂತಹ ಗಿಡಮೂಲಿಕೆಯಾದ ಕೋಷ್ಠದ (*Saussurea costus Lipsch*) ರೆಂಬೆ, ಬೇರುಗಳನ್ನು ಬಳಸಿ ತೀವ್ರತರವಾದ ಕೀಲುನೋವುಗಳನ್ನು ಗುಣಪಡಿಸುತ್ತಾರೆ. ಇವರು ಕೋಷ್ಠ ಗಿಡದ ರೆಂಬೆಯನ್ನು ಸಕ್ಕರೆ ಮತ್ತು ನೀರಿನೊಂದಿಗೆ ಬೆರೆಸಿ ಮಿಶ್ರಣವನ್ನು ತಯಾರಿಸುತ್ತಾರೆ. ಈ ಮಿಶ್ರಣವನ್ನು ನೋವು ಇರುವಂತಹ ಸ್ಥಳಗಳಿಗೆ ಹಚ್ಚುತ್ತಾರೆ. ನೋವು ಬೇಗ ಉಪಶಮನಗೊಳ್ಳಬೇಕಾದರೆ ಇದನ್ನು ವಾರಕ್ಕೆ ಎರಡು ಬಾರಿ ಉಪಯೋಗಿಸಬೇಕೆಂದು ಹೇಳಿದ್ದಾರೆ.ಈ ಗಿಡದ ಬೇರುಗಳಿಂದ ತೆಗೆಯುವಂತಹ ಎಣ್ಣೆಯು ಸಂಧಿವಾತಕ್ಕೆ ತುಂಬಾ ಪರಿಣಾಮಕಾರಿಯಾಗಿದೆ.

(ವಿ.ಸೂ : ಜೆ. ಜೆ. ಲಾಂಗರ್ ಮತ್ತು ಸಹವರ್ತಿಗಳು ಈ ರೀತಿಯ ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ 25 ರೋಗಿಗಳಿಗೆ ಮಾಡಿ ಅವರನ್ನು ಸಂಧಿವಾತದ ನೋವುಗಳಿಂದ ಗುಣಪಡಿಸಿದ್ದಾರೆ. ವಿವರಕ್ಕೆ http://www.pfaf.org/database/plants. ನೋಡಿರಿ.)

ಬೆನ್ನು ನೋವಿಗೆ ಜೀರಿಗೆ ಚಿಕಿತ್ಸೆ

ಜೀರಿಗೆಯ (*Cuminum Cyminum L*) ಪುಡಿಯನ್ನು ನಾಲ್ಕು ಲೋಟ ನೀರಿನಲ್ಲಿ ಹಾಕಬೇಕು. ಇದಕ್ಕೆ ಸ್ವಲ್ಪ ಬೆಲ್ಲ ಮತ್ತು ತುಪ್ಪವನ್ನು ಸೇರಿಸಿ ಕುದಿಸಬೇಕು. ಈ ಮಿಶ್ರಣವನ್ನು ಕಾಲು ಭಾಗ ಬರುವವರೆಗೂ ಕಾಯಿಸಿದ ನಂತರ ಕಷಾಯವನ್ನು ಬೆನ್ನು ನೋವಿನಿಂದ ನರಳುತ್ತಿರುವವರಿಗೆ ಕುಡಿಸಬೇಕು ಎಂದು ಕಾಶ್ಮೀರದ ಮಟ್ಟಾನ್ ನಗರದ ಅರೀನಾರವರು ಹೇಳುತ್ತಾರೆ.

ಹಾಗೆ, ಜೀರಿಗೆಯು ನೋವನ್ನು ಉಪಶಮನ ಮಾಡುತ್ತದಲ್ಲದೇ, ಸೆಳೆತ ರೋಗಕ್ಕೆ ಪ್ರತಿರೋಧಿಯಾಗಿ ಕೆಲಸ ಮಾಡುತ್ತದೆ. ಬಾಹ್ಯ ರೀತಿಯಿಂದಲೂ, ಇದನ್ನು ಗಾಯದ ಹೊಲಿಗೆಗಳ ಮೇಲೂ, ನೋವಾದಂತಹ ಸ್ಥಳಗಳಿಗೂ ಹಾಕಿ ಕಟ್ಟು ಕಟ್ಟಲಾಗುತ್ತದೆ. ಜೀರಿಗೆಯ ಪುಡಿಯನ್ನು ನೀರಿನಲ್ಲಿ ಮಿಶ್ರಣ ಮಾಡಿ ಸುಟ್ಟಗಾಯಗಳಿಗೆ ಲೇಪಿಸಿದರೆ ನೋವಿನಿಂದ, ಉರಿಯಿಂದ ಪರಿಹಾರವಾದಂತಾಗುತ್ತದೆ. (ವಿವರಕ್ಕೆ *http:www.pfaf.org/database/plants.* ನೋಡಿರಿ.)

ಮೂಲ : ಹನಿ ಬೀ, Vol 18 (2) ಎಪ್ರೀಲ್ – ಜೂನ್ 2007.

ಅಡಿಕೆಯ ಔಷಧಿಗಳು

ಆಯುರ್ವೇದದಲ್ಲಿ ಅಡಿಕೆಯ ಔಷಧೀಯ ಗುಣಗಳ ಬಗ್ಗೆ ಅಲ್ಲಲ್ಲಿ ಉಲ್ಲೇಖನಗಳಿವೆ. ಅವನ್ನೆಲ್ಲಾ ಜಾಲಾಡಿ ನೋಡಿ, ಅಡಿಕೆಯನ್ನು ಸಂಸ್ಕರಿಸಿ ಔಷಧ, ಆಸವ, ಲೇಹ್ಯ ತಯಾರಿಸುವಲ್ಲಿ ಪುತ್ತೂರಿನ ಬದನಾಜೆ ಶಂಕರ ಭಟ್‌ರವರು ಯಶಸ್ವಿಯಾಗಿದ್ದಾರೆ. ಮಾರುಕಟ್ಟೆಯಲ್ಲಿ ಸಿಗುವ ಇತರ ಹತ್ತು ಹಲವು ಟಾನಿಕ್‌ಗಳಿಗಿಂತ ಪ್ರಭಾವ ಹೆಚ್ಚು, ಬೆಲೆ ಕಮ್ಮಿ ಎನ್ನಲಾಗಿದೆ. ಇತರ ಆಯುರ್ವೇದ ಔಷಧಗಳೊಡನೆ ಸೇವಿಸಿದರೆ ಇನ್ನೂ ಶೀಘ್ರ ಪರಿಣಾಮ. ನಿತ್ಯ ಸೇವನೆಯಿಂದ ಗಂಟಲು ಕೆರೆತ, ಕಫ, ಶೀತ ಇತ್ಯಾದಿ ದೂರವಾಗುತ್ತವೆ. ಈ ಔಷಧಿಗಳ ಉತ್ಪಾದನಾ ವೆಚ್ಚ ಕಡಿಮೆ, ಆದರೆ ಲಾಭದಾಯಕ ಎನ್ನುವ ಭಟ್‌ರವರು ತಾವು ಅಭಿವೃದ್ಧಿಪಡಿಸಿದ ಔಷಧ ತಯಾರಿಕಾ ಕ್ರಮವನ್ನು ಆಸಕ್ತ ಔಷಧ ಉತ್ಪಾದಕರಿಗೆ ನೀಡಲು ಸಿದ್ಧರಿದ್ದಾರೆ. ಅಡಿಕೆ ಮತ್ತು ವೀಳ್ಯದೆಲೆ ಸೇರಿಸಿ ಶಂಕರಭಟ್‌ರವರು ತಯಾರಿಸಿದ ಆಯುರ್ವೇದ ಔಷಧಿ ತಾಂಬೂಲಾಸವ ಮೂತ್ರಪಿಂಡದ ಶುದ್ಧೀಕರಣಕ್ಕೆ ದಿವ್ಯ ಔಷಧಿ. ಇದರ ತಯಾರಿಕೆಯಲ್ಲಿ ಶೇ.60 ಭಾಗ ಬಿಳಿಗೋಟು ಅಡಿಕೆ ಉಪಯೋಗವಾಗುತ್ತದೆ. ವೀಳ್ಯದೆಲೆ, ಖದಿರ, ಧಾತಕೀ ಕುಸುಮ,ಏಲಕ್ಕಿ, ಹಿಪ್ಲಿ, ಜಾಯಿಕಾಯಿ, ತ್ರಿಫಲ, ಜೇನು, ಬೆಲ್ಲ ಇತ್ಯಾದಿಗಳನ್ನು ಸೇರಿಸುತ್ತಾರೆ. ತಾಂಬೂಲಾಸವ ಈಗ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಬೆಂಗಳೂರು ಮತ್ತು ಕೇರಳದ ಕಾಸರಗೋಡು, ಕಣ್ಣಾನೂರು ಜಿಲ್ಲೆಗಳಲ್ಲಿ ಬಳಕೆಯಾಗುತ್ತಿದೆ.

ಜನಪ್ರಿಯತೆ ಗಳಿಸಿಕೊಳ್ಳುತ್ತಿರುವ ಇವರ ಇನ್ನೊಂದು ಅಡಿಕೆ ಮೂಲದ ಔಷಧಿ ಮಧುಮೇಹಾಸವ. ಇದರಲ್ಲಿ ಶೇ.60 ಬಿಳಿಗೋಟು ಅಡಿಕೆಯ ಬಳಕೆ ಮತ್ತು ಇನ್ನಿತರ 36 ಮೂಲಿಕೆಗಳು ಸೇರಿವೆ. ಸಿಹಿ ಮೂತ್ರ ಕಾಯಿಲೆ ನಿಯಂತ್ರಣಕ್ಕೆ ಹಲವು ವೈದ್ಯರು ಈ ಮದ್ದನ್ನು ಶಿಫಾರಸು ಮಾಡುತ್ತಿದ್ದಾರಂತೆ. ದೇಶದಾದ್ಯಂತ ಇರುವ ನೂರಾರು ಆಯುರ್ವೇದ ಔಷಧ ತಯಾರಕರಿಗೆ ಅಡಿಕೆಯ ಈ ಮಹತ್ವದ ಗುಣಗಳನ್ನು ಮನದಟ್ಟು ಮಾಡಿಕೊಡುವ ಪ್ರಯತ್ನ ಭಟ್ಟರವರದು. ಅಡಿಕೆ ಕೇವಲ ತಿಂದುಗುಳುವ ಕಾಯಿಯಲ್ಲ, ಜೊತೆಗೆ ಔಷಧೀಯ ಬೆಳೆಯೂ ಹೌದು, ಎನ್ನುತ್ತಾರೆ ಶಂಕರ ಭಟ್ಟರವರು. *ಹೆಚ್ಚಿನ ಮಾಹಿತಿಗೆ ಶಂಕರ ಭಟ್ಟರನ್ನು ಮೋ:9448382229 ಫೋ; 08255 239229 ಮೂಲಕ ಸಂಪರ್ಕಿಸಬಹುದು.*

ನಳಪಾಕ

ಪುನರ್ಪುಳಿ ಜ್ಯೂಸ್

ಶಿರಸಿ ತಾಲ್ಲೂಕಿನ ಒಣಿಕೇರಿಯವರಾದ ಗಂಗಾ ವೆಂಕಟೇಶ ಹೆಗಡೆಯವರು ತಾವೇ ಸಾವಯವವಾಗಿ ಬೆಳೆಸಿರುವಂತಹ ಪುನರ್ಪುಳಿಯಿಂದ (*Garcinia sp.*) ಜ್ಯೂಸ್ ತಯಾರಿಸುವ ವಿಧಾನವನ್ನು ತಿಳಿಸಿದ್ದಾರೆ. ಬಿಳಿ ಜಾತಿಯ ಪುನರ್ಪುಳಿ ಕಾಯಿಯು ಹಳದಿ ಬಣ್ಣಕ್ಕೆ ತಿರುಗಿದ ಮೇಲೆ ಕೊಯ್ದು ಅದರ ತಿರುಳನ್ನು ತೆಗೆದು, ನೆನೆಸಿ ರಸವನ್ನು ಹಿಂಡಬೇಕು. ಆ ರಸಕ್ಕೆ ಶೇ. 5 ರಷ್ಟು ಸಕ್ಕರೆ ಅಥವಾ ಬೆಲ್ಲವನ್ನು ಸೇರಿಸಿ 21 ದಿನ ಬಿಸಿನಲ್ಲಿ ಇಟ್ಟು ಗಟ್ಟಿ ಮಾಡಬೇಕು. ಇಂತಹ ರಸವನ್ನು ಮೂರು ವರ್ಷದವರೆಗೆ ಇಟ್ಟರೂ ಕೆಡುವುದಿಲ್ಲವಂತೆ. 200 ಮಿ.ಲೀ ನೀರಿಗೆ ಒಂದು ಚಮಚ ಪುನರ್ಪುಳಿಯ ರಸವನ್ನು ಸೇರಿಸಿ ಚೆನ್ನಾಗಿ ಕಲಸಿದರೆ ಪುನರ್ಪುಳಿ ಜ್ಯೂಸ್ ತಯಾರಾಗುತ್ತದೆ. ಹಲವಾರು ಔಷಧಿ ಗುಣಗಳನ್ನು ಹೊಂದಿರುವ ಪುನರ್ಪುಳಿ ಜ್ಯೂಸ್ ತುಂಬಾ ರುಚಿಯಾಗಿರುವುದರಿಂದ ಮಕ್ಕಳೂ ಸಹ ಇಷ್ಟ ಪಡುತ್ತಾರೆ.

ಔಷಧ ಗುಣಗಳು : ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಪುನರ್ಪುಳಿ ಜ್ಯೂಸ್ ಸೇವಿಸಿದರೆ ಮಲಬದ್ಧತೆ, ಅಸಿಡಿಟಿ, ಅಪೆಂಡಿಕ್ಸ್, ಎದೆ ಉರಿ, ತಲೆನೋವು, ಉಷ್ಣ ಪ್ರಕೃತಿ ಹಾಗೂ ಪಿತ್ತ ನಿವಾರಣೆಯಾಗುತ್ತದೆ.

ಸ್ವತಃ ಗಂಗಾ ವೆಂಕಟೇಶ ಹೆಗಡೆಯವರು ಪುನರ್ಪುಳಿ ಜ್ಯೂಸ್ ತಯಾರಿಸಿ ಮಾರಾಟ ಮಾಡುತ್ತಿದ್ದು, ಕೆ.ಜಿ.ಗೆ 50 ರೂ .ಗಳಂತೆ ಈ ವರ್ಷ 400 ಬಾಟಲ್‌ಗಳು ಖರ್ಚಾಗಿದೆ ಎಂದು ಹೇಳಿದ್ದಾರೆ.

ಹೆಚ್ಚಿನ ಮಾಹಿತಿಗೆ ಗಂಗಾ ವೆಂಕಟೇಶ ಹೆಗಡೆಯವರನ್ನು ಫೋನ್: 08384 247147 ಮೂಲಕ ಸಂಪರ್ಕಿಸಬಹುದು.

ಸಂಗ್ರಹ – ನಿಖಿಲ್ ಎಚ್. ಎನ್.

ಮಳೆ ಮುನ್ಸೂಚಕಗಳು

ಉತ್ತಿ ,ಬಿತ್ತುವಾಗ , ಬೆಳೆ ಚಿಗುರುವಾಗ ನಾಪತ್ತೆಯಾಗುವ ವರುಣ, ಇದ್ದು ಬಿದ್ದ ಬೆಳೆ ಕೊಯ್ಲು ಮಾಡುವಾಗ ಗುಡಿಸಿ ಗಂಡಾಂತರ ಮಾಡುತ್ತಾನೆ. ಇದರಿಂದಾಗುವ ನಷ್ಟದಿಂದ ಪಾರಾಗಲು ಕೆಲ ಪ್ರಕೃತಿಯ ಮುನ್ಸೂಚನೆಗಳನ್ನು ನಮ್ಮ ರೈತರು ಅರ್ಥಮಾಡಿಕೊಂಡಿದ್ದಾರೆ. ಅಂಥದೇ ಒಂದು ಪ್ರಾಕೃತಿಕ ಸಂಜ್ಞೆಯೊಂದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಉತ್ತರ ಕನ್ನಡದ ಒಬ್ಬ ಪ್ರಗತಿಪರ ರೈತ ಹಾಗೂ ಚಿಂತಕ ಬೆಂಗಳೆ ವೆಂಕಟೇಶರವರು ಯಶಸ್ವಿಯಾಗಿ, ರೈತಬಾಂಧವರಿಗೂ ಕೂಡ ಇದರ ಉಪಯೋಗವನ್ನು ಪಡೆಯಲು ಮಾರ್ಗದರ್ಶನ ನೀಡುತ್ತಿದ್ದಾರೆ. ಇಂತಹ ಒಂದು ಸಂಜ್ಞೆ ನೀಡುವ ಮೀನನ್ನು ಸ್ಥಾನಿಕವಾಗಿ ಜಬ್ಬು ,ಗಿರ್ಲು, ಗಿಂಡು, ಅಚ್ಚಿಲುಣ ಮುಂತಾದ ಹೆಸರಿನಲ್ಲಿ ಕರೆಯುತ್ತಾರೆ. ಇದು ಮುಂಗಾರಿನ ಪ್ರವಾಹದಲ್ಲಿ ನದಿ ಕೆರೆಗಳಿಂದ ಕೊಚ್ಚಿಕೊಂಡು ಬಂದು ಕಳೆ ಜಡ್ಡುಗಳಲ್ಲಿ ಮೊಟ್ಟೆ ಇಡುತ್ತವೆ. ಸರಿಸುಮಾರು ಅಕ್ಟೋಬರ್‌ನಲ್ಲಿ ಮರಿಗಳು ಬಲಿತು ಸಣ್ಣ ಪುಟ್ಟ ಝುರಿ, ಕಾಲುವೆ, ಹೊಲಗದ್ದೆಗಳ ತಿಳಿನೀರಿನಲ್ಲಿ ಗುಂಪು ಗುಂಪಾಗಿ ಆಹಾರದ ಅನ್ವೇಷಣೆಯಲ್ಲಿ ತೊಡಗಿರುತ್ತವೆ. ಯಾವುದೇ ಸಣ್ಣಪುಟ್ಟ ಗಾಳಿ ಮಳೆಗಳಿಗೆ ಪ್ರತಿಕ್ರಿಯೆ ತೋರಿಸದ ಈ ಗಿರ್ಲು, ಅದೇ ಪ್ರವಾಹದಂಥ ದೊಡ್ಡ ಮಳೆ ಸ್ಥಾನಿಕವಾಗಿ ನಿರೀಕ್ಷಿತ ಎಂದಾದಲ್ಲಿ ಕರಾರುವಾಕ್ಕಾಗಿ ಒಂದೆರಡು ದಿನ ಮುಂಚಿತವಾಗಿಯೇ ಅರಿತು ಪ್ರತಿಕ್ರಿಯಿಸುತ್ತವೆ. ರಭಸದ ನೀರಿನ ಸೆಳೆತಕ್ಕೇನಾದರೂ, ಈ ದುರ್ಬಲ ಮೀನು ಮರಿಗಳು ಸಿಕ್ಕಲ್ಲಿ ಅವುಗಳ ನಾಶ ಖಂಡಿತ. ಅದು ತನ್ನ ಕುಲದ ಅಸ್ತಿತ್ವ ಉಳಿಸಿಕೊಳ್ಳಲು ಮುಂಜಾಗರೂಕತೆಯಿಂದ ಸುರಕ್ಷಿತವಾದ ಕೆರೆಕಟ್ಟೆಗಳಿಗೆ ಸಾಮೂಹಿಕವಾಗಿ ವಲಸೆ ಹೋಗುತ್ತವೆ. ಮೇಲ್ಮುಖವಾಗಿ ಹೀಗೆ ಚಲಿಸುವ ಇದನ್ನು ಹತ್ತು ಮೀನು ಎನ್ನುತ್ತಾರೆ. ಹತ್ತು ಮೀನು ದೊಡ್ಡ ಮಳೆ ಬೀಳುವ ಸಂಕೇತ. ಇದು ಮಲೆನಾಡ ರೈತರ ಸಾಂಪ್ರದಾಯಿಕ ಜ್ಞಾನ. ಇದೇ ರೀತಿ ಮಳೆಯ ಮುನ್ಸೂಚನೆ ಕುರಿತಾದ ಪಾರಂಪರಿಕವಾದ ಹತ್ತು ಹಲವಾರು ನಂಬಿಕೆಗಳು ಹೀಗಿವೆ. ಸಂಜೆ ಹೊತ್ತಿನಲ್ಲಿ ಮರಿಗಪ್ಪೆಗಳು ಮನೆಯೊಳಗೆ ಬರುವುದು , ಇರುವೆಗಳು ಮೊಟ್ಟೆ ಹೊತ್ತು ಸುರಕ್ಷಿತ ಸ್ಥಳಕ್ಕೆ ಓಟ ಹೋಗುವುದು, ಚಿಟ್ಟೆಗಳು ಚಕ್ರಾಕಾರವಾಗಿ ಸುತ್ತುತ್ತಾ ಭೂಮಿಗೆ ಹತ್ತಿರ ಹತ್ತಿರ ಬರುವುದು, ಕಾಗೆ, ಗುಬ್ಬಿಗಳು ಒಣಮಣ್ಣಿನಲ್ಲಿ ಹೊರಳಾಡುವುದು, ಕಡಿನೊಣ, ಸಂಜೆ ಕೊಟ್ಟಿಗೆಯಲ್ಲಿರುವ ದನಕರುಗಳ ಮೇಲೆ ದಾಳಿ ಮಾಡುವುದು, ಸೂರ್ಯನಿಗೆ ಕೊಡೆ ಕಟ್ಟುವುದು ಮುಂತಾದ ಪ್ರಾಕೃತಿಕ ಲಕ್ಷಣಗಳು ಮಳೆರಾಯನ ಆಗಮನದ ಮುನ್ಸೂಚನೆ ಗಳೆಂದು ರೈತ ನಂಬುತ್ತಾನೆ.

ಆಧಾರ: ಪ್ರಜಾವಾಣಿ, ಆಗಸ್ಟ್ 30, 2007.

ಪ್ರತಿಕ್ರಿಯೆ

ಮಾನ್ಯರೇ,

ಪೈರು 13, ಕೊಯಿಲು 2 ಮೇ – ಆಗಸ್ಟ , 2007 ರ ಸಂಚಿಕೆಯಲ್ಲಿ ಮಲೆನಾಡ ಗಿಡ್ಡ ತಳಿಯ ಮುಖ ಪುಟ ಚೆನ್ನಾಗಿ ಬಂದಿದೆ. ನಾಡತಳಿ ಹಸುಗಳ ಚಿತ್ರ, ಹಾಗೂ ಗುಣ ವಿಶೇಷ ಒಳಗೊಂಡ ಮಾಹಿತಿ ನೀಡಿದರೆ ಉತ್ತಮವಾಗಿರುತ್ತದೆ. ಈಗಾಗಲೆ ಹಿತ್ತಲ ಗಿಡದಲ್ಲಿ ವಿವಿಧ ತಳಿ ಭತ್ತ, ರಾಗಿ ಧಾನ್ಯ ವಿವರ ಬಂದಿದೆ. ಅದರಂತೆ ಕರ್ನಾಟಕದಲ್ಲಿ ಈಗ ಲಭ್ಯವಿರುವ ಎಲ್ಲ ನಾಡ ತಳಿಯ ಹಸುಗಳ ಹಾಗೂ ಇತರ ಸಾಕು ಪ್ರಾಣಿಗಳ ವಿವರ ನೀಡ ಬೇಕಾಗಿ ವಿನಂತಿ. ಪ್ರಾಚೀನ ಹತ್ತಿ ತಳಿ ಲಭ್ಯತೆಯ ಮಾಹಿತಿಯಿಲ್ಲ . ದಯವಿಟ್ಟು ಮಾಹಿತಿ ನೀಡಿ. ವಂದನೆಗಳು , ಇಂತಿ

ಚೆನ್ನಬಸವರೆಡ್ಡಿ ಪಾಟೀಲ,ಹಂಬರಾಳ, ಶಿವ ಪ್ರಿಂಟರ್ಸ, ಗಂಜ ರಸ್ತೆ, ರಾಯಚೂರು –584102 *(ನಿಮ್ಮ ಸಲಹೆಯಂತೆ ಈ ಸಂಚಿಕೆಯಲ್ಲಿ ಮಲೆನಾಡ ಗಿಡ್ಡ ಮತ್ತು ಹಳ್ಳಿಕಾರ್ ತಳಿಗಳ ವಿವರ ನೀಡಲಾಗಿದೆ. ಇತರ ದೇಶಿ ತಳಿಗಳ ವಿವರ ಮುಂದೆ ನೀಡುವೆವು. ಹಾಗೇ ನಾಟಿ ಹತ್ತಿ ತಳಿಗಳ ಬಗ್ಗೆ, ಕೂಡ. ಸಂ.)*

ಬಸವನ ಗುಡಿಯ ಕಡಲೆಕಾಯಿ ಪರಿಷೆ

ಬಸವನ ಗುಡಿಯ ಶ್ರೀ ದೊಡ್ಡ ಬಸವಣ್ಣ ದೇವಾಲಯದ ಅಂಗಳದಲ್ಲಿ ಕಡಲೆಕಾಯಿ ಪರಿಷೆ ಡಿಸೆಂಬರ್ 3 ಮತ್ತು 4 ರಂದು ನಡೆಯಿತು. ಪ್ರತಿವರ್ಷ ಕಾರ್ತೀಕ ಮಾಸದ ಕಡೆಯ ಸೋಮವಾರ ಪರಿಷೆ ಆರಂಭವಾಗುತ್ತದೆ. ಈ ಪರಿಷೆಯಲ್ಲಿ ಕೃಷ್ಣಗಿರಿ, ಪಾವಗಡ, ಮಧುಗಿರಿ ಮತ್ತು ಆಂಧ್ರಪ್ರದೇಶ, ಹೀಗೆ ಹಲವಾರು ಕಡೆಗಳಿಂದ ಬಂದಿರುವಂತಹ ಕೃಷಿಕರು ಮತ್ತು ವ್ಯಾಪಾರಿಗಳು ತಾವು ಬೆಳೆದಿರುವಂತಹ ನಾನಾ ತಳಿಯ ಕಡಲೆಕಾಯಿಗಳನ್ನು ವ್ಯಾಪಾರ ಮಾಡುತ್ತಾರೆ. ಜೊತೆಗೆ ವಾಣಿಜ್ಯ ಮಳಿಗೆಗಳಲ್ಲಿ ಕೂಡಾ ಕಡಲೆಕಾಯಿ ವ್ಯಾಪಾರ ನಡೆಯುತ್ತದೆ. ಕಡಲೆಕಾಯಿಗಳನ್ನು ದೊಡ್ಡ ಗಣೇಶನ ಗುಡಿಯ ಹತ್ತಿರ ಮಾರಲಾಗುತ್ತದೆ. ಸೋಮವಾರ ನಡೆದಿರುವಂತಹ ಜಾತ್ರೆಯಲ್ಲಿ ಕಡಲೆಕಾಯಿಯ ರಾಶಿಗಳು ಜನರನ್ನು ಆಕರ್ಷಿಸುತ್ತಿದ್ದವು. ಬೇರೆ ದಿನಗಳಲ್ಲಿ ಒಂದು ಕೆ.ಜಿ.ಗೆ 30 ರೂ. ಇರುವ ಕಡಲೆಕಾಯಿಯು ಪರಿಷೆ ದಿನಗಳಲ್ಲಿ ಸುಮಾರು 10 –15 ರೂ. ಗಳಿಗೆ ಸಿಗುತ್ತದೆ. ಇವುಗಳಲ್ಲಿ ವಿವಿಧ ರುಚಿಯ ಅಂದರೆ ಉಪ್ಪು ಹಚ್ಚಿರುವ ಮತ್ತು ಹಚ್ಚದೇ ಹುರಿದಿರುವಂತಹ ಕಾಳುಗಳು, ಕುದಿಸಿರುವ ಮತ್ತು ಹುರಿದಿರುವಂತಹ ಕಾಯಿಗಳು ಜೊತೆಗೆ ಕಡಲೇಕಾಯಿ ಮೆಲ್ಲಲು ವಿವಿಧ ರುಚಿಯ ಬೆಲ್ಲವೂ, ಪರಿಷೆಯಲ್ಲೇ ಸಿಗುತ್ತದೆ.ಹಲವಾರು ತಿಂಡಿ–ತಿನಿಸುಗಳ ಅಂಗಡಿಗಳು ಕೂಡ ಕಾಣಿಸಿಕೊಂಡಿದ್ದವು. ಮೆಕ್ಕೆಜೋಳದ ವ್ಯಾಪಾರವು ಕೂಡ ಭರದಿಂದ ನಡೆಯುತ್ತಿತ್ತು. ಒಟ್ಟಿನಲ್ಲಿ ಮುಖ್ಯ ಆಕರ್ಷಣೆಯಾದ ಕಡಲೇಕಾಯಿಯು ಈ ಎರಡು ದಿನದ ಜಾತ್ರೆಯಲ್ಲಿ 2000 ಕ್ವಿಂಟಾಲ್‌ಗೂ ಹೆಚ್ಚು ಮಾರಾಟವಾಗುತ್ತದೆ.

ಕಡಲೆಕಾಯಿ ಪರಿಷೆಯ ಪ್ರಾರಂಭದ ಕಾರಣಕ್ಕೆ ಒಂದು ದಂತ ಕಥೆಯೇ ಇದೆ. ಮೊದಲು ಬಸವನ ಗುಡಿಯ ಸ್ಥಳದಲ್ಲಿ ಸುಂಕೇನಹಳ್ಳಿ ಎಂಬ ಊರಿತ್ತು. ಪ್ರತೀ ವರ್ಷವೂ ಕೊಯ್ಲಿನ ಸಮಯದ ಮೊದಲು ಒಂದು ಗೂಳಿಯು ಕಾಣಿಸಿಕೊಂಡು ಬೆಳೆಯನ್ನೆಲ್ಲಾ ತಿಂದು ಹಾಕುತ್ತಿತ್ತು. ಆದ್ದರಿಂದ ಕೃಷಿಕರೆಲ್ಲಾ ಒಂದಾಗಿ ಗೂಳಿಯನ್ನು ಬೆನ್ನಟ್ಟಲು ಹೋದಾಗ ಅದು ಶಿಲೆಯಾಗಿ ಮಾರ್ಪಟ್ಟು ದಿನೇ ದಿನೇ ಬೆಳೆಯಲಾರಂಭಿಸಿತು ಎಂಬ ಪ್ರತೀತಿ. ಭಕ್ತರೆಲ್ಲ ಸೇರಿ ಬಸವಣ್ಣನಿಗೆ ತನ್ನ ಬೆಳವಣಿಗೆಯನ್ನು ನಿಲ್ಲಿಸು ಎಂದು ಬೇಡುತ್ತಾ ಅದರ ತಲೆ ಮೇಲೆ ಗಡಾರಿ ಹೊಡೆದರಂತೆ. ಅಂದಿನಿಂದ ಬೆಳವಣಿಗೆ ನಿಂತಿತು ಎಂಬುದೂ ಪ್ರತೀತಿ. ಇನ್ನೊಂದು ಹೇಳಿಕೆಯಂತೆ ಸ್ಥಳೀಯರು, ದೇವರಾದ ಶಿವನೇ ಗೂಳಿಯ ರೂಪದಲ್ಲಿ ಬಂದಿರುವುದಾಗಿ ನಂಬಿ ಒಂದು ತೀರ್ಮಾನಕ್ಕೆ ಬಂದು , ಕೊಯ್ಲಿ ಗೆ ಬಂದಿರುವ ಮೊದಲನೆಯ ಬೆಳೆಯನ್ನು ಪ್ರತಿವರ್ಷವೂ ಶಿವನಿಗೆ ಸಮರ್ಪಿಸುತ್ತೇವೆ ಎಂದು ಬೇಡಿಕೊಂಡರು. ಆದ್ದರಿಂದ ಜಾತ್ರೆ ಪ್ರತಿ ವರ್ಷವೂ ನಡೆಯುತ್ತದೆ. ಬಸವನಗುಡಿಯ ಬಸವಣ್ಣನ ದೇವಾಲಯ ವನ್ನು ಬೆಂಗಳೂರಿನ ನಿರ್ಮಾತೃರಾದ ಮಾಗಡಿ ಕೆಂಪೆಗೌಡರು ಕಟ್ಟಿಸಿದರಂತೆ.

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

– ಸಂಪಾದಕ

ಹಿತ್ತಲಗಿಡದ ಚಂದಾ ವಿವರ

ವಿಂಗಡಣೆ	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

* *Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಆರನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ** (National Register)ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸ ಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಪೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಆರನೆ ಸ್ಪರ್ಧೆಗೆ ಡಿಸೆಂಬರ್ 2008ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಅಂಚೆ ಚೀಟಿ

ಗೆ, ...

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com